# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:24-03-2025 ರಂದು ಶುಕ್ರವಾರ "ಶತಮಾನೋತ್ಸವ ಭವನದ ಮೂರನೇ ಮಹಡಿಯ ಸಿಂಡಿಕೇಟ್ ಸಭಾಂಗಣದಲ್ಲಿ" ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಶರತ್ ಅನಂತಮೂರ್ತಿ, ಕುಲಪತಿಗಳು | ಅಧ್ಯಕ್ಷರು |
| 2. | ಪ್ರೊ. ಗೋಪಿನಾಥ್ ಎಸ್.ಎಂ., ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 3. | ಪ್ರೊ. ಜೆ. ನಾರಾಯಣ, ಪ್ರಾಧ್ಯಾಪಕರು. | ಸದಸ್ಯರು |
| 4. | ಪ್ರೊ. ಜಗನ್ನಾಥ ಕೆ. ಡಾಂಗೆ, ಡೀನರು, ಶಿಕ್ಷಣ ನಿಕಾಯ | ಸದಸ್ಯರು |
| 5. | ಶ್ರೀ ಶಶಿಧರ್ ಬಿ.ಎನ್. | ಸದಸ್ಯರು |
| 6. | ಡಾ. ಕೆ.ಎಲ್. ಅರವಿಂದ. ಪ್ರಾಂಶುಪಾಲರು | ಸದಸ್ಯರು |
| 7. | ಡಾ. ಮಧು ಜಿ. ಪ್ರಾಂಶುಪಾಲರು | ಸದಸ್ಯರು |
| 8. | ಶ್ರೀ ಉಲ್ಲಾಸ್ ಟಿ.ಜಿ. ಪ್ರಾಂಶುಪಾಲರು | ಸದಸ್ಯರು |
| 9. | ಡಾ. ಶೈಲಜಾ ಸಿದ್ದಪ್ಪ ಹೊಸಳ್ಳೇರ ಪ್ರಾಂಶುಪಾಲರು | ಸದಸ್ಯರು |
| 10. | ಶ್ರೀ ಶಿವಕುಮಾರ್ ಎಂ. | ಸದಸ್ಯರು |
| 11. | ಶ್ರೀ ಲಕ್ಷ್ಮಿಕಾಂತ ಚಿಮನೂರು | ಸದಸ್ಯರು |
| 12. | ಪ್ರೊ. ಸಾಕಮ್ಮ ಬಿ. | ಸದಸ್ಯರು |
| 13. | ಶ್ರೀ ಮುಸಾವೀರ್ ಬಾಷಾ ಎಂ. | ಸದಸ್ಯರು |
| 14. | ಶ್ರೀ. ಕೆ.ಪಿ. ಶ್ರೀಪಾಲ್ | ಸದಸ್ಯರು |
| 15. | ಶ್ರೀ ಹೆಚ್.ಜಿ. ಅರವಿಂದ | ಸದಸ್ಯರು |

**ಗೈರುಹಾಜರಾದ ಸದಸ್ಯರು:**

| | | |
|---|---|---|
| 1. | ಡಾ. ಕೇಶವ ಟಿ.ಕೆ. ಕಾಲೇಜು ಶಿಕ್ಷಣ ಇಲಾಖೆಯ ಆಯುಕ್ತರ ಪ್ರತಿನಿಧಿ | ಸದಸ್ಯರು |
| 2. | ಶ್ರೀ ಶಾಂತಕುಮಾರ್ ಜಿ.ಎಸ್. | ಸದಸ್ಯರು |
| 3. | ಶ್ರೀ ಎ.ಎಲ್. ಮಂಜುನಾಥ್, ಕೆ.ಎ.ಎಸ್.(ಸೂಪರ್ ಟೈಮ್ ಶ್ರೇಣಿ), ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |
| 4. | ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 5. | ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 6. | ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು. | ಸದಸ್ಯರು |
| 7. | ಆಯುಕ್ತರು, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.. | ಸದಸ್ಯರು |

**ಪೂರ್ವಾನುಮತಿಯೊಂದಿಗೆ ಗೈರು ಹಾಜರಾದ ಸದಸ್ಯರು:**

ಯಾರು ಇರುವುದಿಲ್ಲ.

**ಪ್ರಸ್ತಾವನೆ:** ಪ್ರಾರಂಭದಲ್ಲಿ ಸಭೆಗೆ ಆಗಮಿಸಿದ ಸದಸ್ಯರುಗಳೆಲ್ಲರಿಗೂ ಮಾನ್ಯ ಕುಲಸಚಿವರು ಆತ್ಮೀಯವಾಗಿ ಸ್ವಾಗತ ಕೋರಿದರು. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000ರ ಪ್ರಕರಣ-28(ಡಿ)ರನ್ವಯ ಸಿಂಡಿಕೇಟ್‌ಗೆ ನಾಮನಿರ್ದೇಶಿತರಾದ ಶಿಕ್ಷಣ ನಿಕಾಯದ ಡೀನರಾದ ಪ್ರೊ. ಜಗನ್ನಾಥ ಕೆ. ಡಾಂಗೆ ರವರನ್ನು ಆತ್ಮೀಯವಾಗಿ ಸ್ವಾಗತಿಸಿದರು. ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯದ ಡೀನರಾಗಿ ಅವಧಿ ಮುಗಿಸಿರುವ ಪ್ರೊ.ಎಸ್.ವಿ.ಕೃಷ್ಣಮೂರ್ತಿ ಇವರ ಸೇವೆಯನ್ನು ಸ್ಮರಿಸಿ ಅಭಿನಂದಿಸಲಾಯಿತು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಮಾನ್ಯ ಕುಲಪತಿಗಳು ಪ್ರಾಸ್ತಾವಿಕವಾಗಿ ಮಾತನಾಡಿ, ವಿಶ್ವವಿದ್ಯಾಲಯದ 2025-26ನೇ ಆರ್ಥಿಕ ವರ್ಷದ ಆಯವ್ಯಯ ಅನುಮೋದನೆ ಸೇರಿದಂತೆ ಕೆಲವು ವಿಷಯಗಳ ಚರ್ಚೆ ಮತ್ತು ನಿರ್ಣಯಕ್ಕಾಗಿ ಈ ಅಸಾಮಾನ್ಯ ಸಿಂಡಿಕೇಟ್ ಸಭೆಯನ್ನು ಕರೆಯಲಾಗಿದ್ದು, ಎಲ್ಲರೂ ತಮ್ಮ ಅತ್ಯಮೂಲ್ಯ ಸಲಹೆ ಮತ್ತು ಸಹಕಾರ ನೀಡುವಂತೆ ಕೋರಿದರು.

ಕುಲಸಚಿವ (ಆಡಳಿತ) ಇವರು ಅವರ ವೈಯಕ್ತಿಕ ಕೆಲಸದ ನಿಮಿತ್ತ ರಜೆಯಲ್ಲಿದ್ದು, ಅವರ ಗೈರು ಹಾಜರಿಯಲ್ಲಿ ಕುಲಸಚಿವ (ಪರೀಕ್ಷಾಂಗ) ರವರು ಸಭೆಯನ್ನು ನಡೆಸಿಕೊಡಲಿದ್ದಾರೆಂದು ಸಭೆಯ ಗಮನಕ್ಕೆ ತಂದರು.

ನಂತರ ಕಾರ್ಯಸೂಚಿಯನ್ವಯ ವಿಷಯಗಳನ್ನು ಕೈಗೆತ್ತಿಕೊಳ್ಳಲಾಯಿತು.

## ಪ್ರಾಧಿಕಾರ ವಿಭಾಗ

**2025-ಸಿಂ-3.01:** 2025-26ನೇ ಸಾಲಿನ ವಾರ್ಷಿಕ ಆಯ-ವ್ಯಯ ಅಂದಾಜನ್ನು ಅನುಮೋದಿಸುವ ಬಗ್ಗೆ.

**ಚರ್ಚೆ:** ಸಭೆಗೆ ವಿಶೇಷ ಆಹ್ವಾನಿತರಾಗಿದ್ದ, ಹಣಕಾಸು ಅಧಿಕಾರಿಗಳಾದ ಪ್ರೊ.ಹೆಚ್.ಎನ್.ರಮೇಶ್ ರವರು ಮಾತನಾಡಿ, ದಿನಾಂಕ:19-03-2025 ರಂದು ಬೆಂಗಳೂರಿನಲ್ಲಿ ನಡೆದ ಹಣಕಾಸು ಸಮಿತಿ ಸಭೆಯಲ್ಲಿ ಮಂಡಿಸಲಾಗಿದ್ದ ವಿಶ್ವವಿದ್ಯಾಲಯದ 2025-26ನೇ ಸಾಲಿನ ವಾರ್ಷಿಕ ಆಯ-ವ್ಯಯ ಅಂದಾಜನ್ನು ಕೆಲವು ಮಾರ್ಪಾಡುಗಳೊಂದಿಗೆ ಅನುಮೋದಿಸಲಾಗಿದ್ದು, ಅದನ್ನು ಸಿಂಡಿಕೇಟ್ ಸಭೆಯ ಅನುಮೋದನೆಗೆ ಮಂಡಿಸಿದೆ ಎಂದು ತಿಳಿಸಿ ಪವರ್ ಪಾಯಿಂಟ್ ಪ್ರೆಸೆಂಟೇಶನ್ ಮಾಡುವುದರ ಮೂಲಕ ರೂ.13384.84ಲಕ್ಷಗಳ ಸ್ವೀಕೃತಿ ಮತ್ತು ರೂ.17110.93ಲಕ್ಷಗಳ ವೆಚ್ಚಗಳನು ಅಂದಾಜಿಸಲಾಗಿದ್ದು, ರೂ.3726.12ಲಕ್ಷಗಳ ಕೊರತೆ ಬಜೆಟ್ ಆಗಿದೆ ಎಂದರು.

ಮಾನ್ಯ ಕುಲಪತಿಯವರು ಮಾತನಾಡಿ, ಆರ್ಟ್ ಆಫ್ ಲೀವಿಂಗ್ ಎಂಬ ಶೀರ್ಷಿಕೆಯನ್ನು ಯೋಗ ಮತ್ತು ಧ್ಯಾನ ಎಂದು ಬದಲಿಸುವಂತೆ ತಿಳಿಸಿದರು. ಶ್ರೀ ಬಿ.ಎನ್. ಶಶಿಧರ್ ರವರು ಮಾತನಾಡಿ, ವಿಶ್ವವಿದ್ಯಾಲಯ ಉದ್ಯೋಗ ಮತ್ತು ಮಾರ್ಗದರ್ಶನ ಕೇಂದ್ರದ ವೆಚ್ಚಗಳಿಗೆ ಅನುದಾನ ಒದಗಿಸಲಾಗಿದ್ದು, ಸದರಿ ಕೇಂದ್ರವು ಏನು ಕೆಲಸ ಮಾಡುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ಸದರಿ ಕೇಂದ್ರವು ವಿದ್ಯಾರ್ಥಿಗಳಿಗೆ ಉದ್ಯೋಗ ಮಾಹಿತಿ ನೀಡುವುದು, ಸ್ನಾತಕೋತ್ತರ ಪದವೀಧರರ ನೋಂದಣಿ, ಕ್ಯಾಂಪಸ್ ಸಂದರ್ಶನ ಮುಂತಾದ ಕೆಲಸಗಳನ್ನು ಮಾಡುತ್ತದೆ ಎಂದರು.

ಶ್ರೀ ಕೆ.ಪಿ. ಶ್ರೀಪಾಲ್ ಮತ್ತು ಶ್ರೀ ಶಿವಕುಮಾರ್ ಎಂ. ಇವರು ಮಾತನಾಡಿ, ನ್ಯಾಕ್ ಇತ್ಯಾದಿ ವೆಚ್ಚಗಳಿಗಾಗಿ ವಿಶೇಷ ಅನುದಾನ ಒದಗಿಸಿದ್ದು, ಅಗತ್ಯ ಮೂಲಭೂತ ಸೌಲಭ್ಯಗಳು ಸದರಿ ಅನುದಾನದಿಂದ ಆಗುತ್ತವೆ. ಆದಾಗ್ಯೂ ಅಭಿವೃದ್ಧಿ ವೆಚ್ಚಗಳಿಗಾಗಿ ರೂ.1.00 ಕೋಟಿಗಳನ್ನು ಒದಗಿಸಲಾಗಿದೆ ಇದನ್ನು ಬೇರೆ ಶೀರ್ಷಿಕೆಗಳಿಗೆ ಬಳಸಬಹುದು ಎಂದರು. ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ ತುರ್ತು ಕೆಲಸಗಳಿಗಾಗಿ ಸದರಿ ಮೊಬಲಗು ಅಗತ್ಯವಿದೆ ಎಂದರು.

ಶ್ರೀ ಬಿ.ಎನ್.ಶಶಿಧರ್ ರವರು ಮಾತನಾಡಿ, ಹೊರಗುತ್ತಿಗೆ ನೌಕರರ ವೇತನಕ್ಕಾಗಿ 2024-25ನೇ ಸಾಲಿನಲ್ಲಿ ರೂ.962.75 ಲಕ್ಷಗಳನ್ನು ಒದಗಿಸಲಾಗಿದ್ದು, 2025-26 ರಲ್ಲಿ ರೂ.1002.28 ಗಳನ್ನು ಒದಗಿಸಿದೆ. ಹೊರಗುತ್ತಿಗೆ ನೌಕರರ ಸಂಖ್ಯೆ ಕಡಿಮೆ ಮಾಡುವುದಾಗಿ ತಿಳಿಸುತ್ತೀರಿ. ಆದರೆ, ಒದಗಿಸಿರುವ ಅನುದಾನ ಹೆಚ್ಚಾಗಿದೆ ಎಂದ ಅವರು ಆಯವ್ಯಯದ ಕೊರತೆಯನ್ನು ಹೇಗೆ ಸರಿದೂಗಿಸುತ್ತೀರಿ ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ, ಹೊರಗುತ್ತಿಗೆ ನೌಕರರ ವೇತನಕ್ಕಾಗಿ 2024-25ನೇ ಸಾಲಿನಲ್ಲಿಯೇ ಅವರಿಗೆ 3 ತಿಂಗಳುಗಳ ವೇತನ ಪಾವತಿಸುವುದು ಬಾಕಿ ಇರುವುದರಿಂದ ಹೆಚ್ಚಿನ ಅನುದಾನ ಅವಶ್ಯಕತೆ ಇದೆ. ನಿವೃತ್ತಿ ವೇತನಕ್ಕೆ ರೂ.33.00 ಕೋಟಿಗಳ ಅಗತ್ಯವಿದೆ. ಆದರೆ, ಸರ್ಕಾರದಿಂದ ಕೇವಲ ರೂ.10.00 ಕೋಟಿಗಳು ಮಾತ್ರ ಬಿಡುಗಡೆಯಾಗಿದೆ. ವ್ಯತ್ಯಾಸದ ಮೊಬಲಗನ್ನು ಸರ್ಕಾರ ಮಂಜೂರು ಮಾಡಿದಲ್ಲಿ ಅನುಕೂಲವಾಗುತ್ತದೆ. ಹಾಗೆಯೇ ಎನ್.ಪಿ.ಎಸ್. ನೌಕರರ ಮೊಬಲಗು ಪ್ರತಿ ತಿಂಗಳು ರೂ.25.00 ಲಕ್ಷಗಳನ್ನು ವಿಶ್ವವಿದ್ಯಾಲಯವೇ ಭರಿಸುತ್ತಿದೆ. ಇದನ್ನು ಕೂಡ ಸರ್ಕಾರ ಮರುಪಾವತಿಸಿದಲ್ಲಿ ಕೊರತೆಯಲ್ಲಿ ಕಡಿಮೆಯಾಗುತ್ತದೆ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

Scanned with OKEN Scanner

ಎಂದರು. ಶ್ರೀಮತಿ ಸಾಕಮ್ಮ ರವರು ಮಾತನಾಡಿ, ಕೊರತೆ ಕಡಿಮೆ ಮಾಡಲು ಕ್ಯಾಪಿಟಲ್ ವೆಚ್ಚದಲ್ಲಿ ಕಡಿಮೆ ಮಾಡಲು ಏನಾದರೂ ಮೂಲಗಳಿವೆಯೇ ಪರಿಶೀಲಿಸಿ ಎಂದರು. ಮಾನ್ಯ ಕುಲಪತಿಗಳು ಮಾತನಾಡಿ, ಪ್ರವೇಶ ಶುಲ್ಕದಲ್ಲಿ ಶೇ.10 ರಷ್ಟು ಹೆಚ್ಚಿಸಬಹುದು ಎಂದರು. ಡಾ.ಜಿ. ಮಧು ರವರು ಮಾತನಾಡಿ, ಈಗಾಗಲೇ ಶೇ.10ರಷ್ಟು ಹೆಚ್ಚಿಸಲಾಗಿದ್ದು, ಮತ್ತೆ ಹೆಚ್ಚಿಸಿದಲ್ಲಿ ವಿದ್ಯಾರ್ಥಿಗಳಿಗೆ ಹೊರೆಯಾಗುತ್ತದೆ ಎಂದರು. ನಿವೃತ್ತಿ ವೇತನ ಮತ್ತು ಎನ್.ಪಿ.ಎಸ್. ಹಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬಹುದು ಎಂದರು.

ಶ್ರೀ ಬಿ.ಎನ್. ಶಶಿಧರ ರವರು ಮಾತನಾಡಿ, ಸ್ನಾತಕೋತ್ತರ ವಿಭಾಗಗಳು ಮತ್ತು ಘಟಕ ಕಾಲೇಜುಗಳು ಸಂಘಟಿಸುವ ವಿಚಾರಸಂಕಿರಣ, ಸಮ್ಮೇಳನ ಮುಂತಾದ ಕಾರ್ಯಕ್ರಮ ಏರ್ಪಡಿಸಲು ಅನುದಾನ ನೀಡುವ ಸಂಸ್ಥೆಗಳಿಗೆ ಪ್ರಸ್ತಾವನೆ ಸಲ್ಲಿಸಿ ಮಂಜೂರು ಮಾಡಿಸಿಕೊಳ್ಳಬಹುದು ಹಾಗೂ ದಾನಿಗಳ ನೆರವಿನಿಂದ ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಸದರಿ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾಲಯದ ಅನುದಾನವನ್ನು ಕಡಿಮೆ ಮಾಡಬಹುದು. ಅಲ್ಲದೇ, ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸಿದಲ್ಲಿ ಕೂಡ ಹಣ ಉಳಿಸಬಹುದು ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ, ವಿಚಾರಸಂಕಿರಣ, ಸಮ್ಮೇಳನ ಮುಂತಾದ ಕಾರ್ಯಕ್ರಮಗಳಲ್ಲಿ ಅದ್ದೂರಿ ಊಟೋಪಚಾರ, ಅಧಿಕ ಮೌಲ್ಯದ ಉಡುಗೊರೆಗಳನ್ನು ನೀಡುವ ಬದಲು ಸದರಿ ವೆಚ್ಚಗಳನ್ನು ಸರಳೀಕರಿಸಿದಲ್ಲಿ ಸಾಕಷ್ಟು ಉಳಿತಾಯ ಮಾಡಬಹುದು ಎಂದು ಶ್ರೀ ಲಕ್ಷ್ಮಿಕಾಂತ ಚಿಮನೂರು ರವರು ಮಾತನಾಡಿ, ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ ಸಿಬ್ಬಂದಿಗಳ ಸಂಖ್ಯೆಯನ್ನು ಕಡಿತಗೊಳಿಸಿದಲ್ಲಿ ಸರ್ಕಾರ ಅನುದಾನ ನೀಡುತ್ತದೆಯೇ ಎಂದರು. ಕುಲಸಚಿವ (ಮೌಲ್ಯಮಾಪನ)ರವರು ಮಾತನಾಡಿ, ಖಾಯಂ ನೌಕರರ ವೇತನ ಮಾತ್ರ ಸರ್ಕಾರದಿಂದ ಬರುತ್ತದೆ ಎಂದರು. ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ, ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ ಲಿಪಿಕ ನೌಕರರ ಹುದ್ದೆಗಳಿಗೆ ಸರ್ಕಾರದ ಅನುಮೋದನೆ ಪಡೆದು, ಖಾಯಂ ನೇಮಕಾತಿ ಮಾಡಿಕೊಂಡಲ್ಲಿ ಹೊರಗುತ್ತಿಗೆ ನೌಕರರ ಸಂಖ್ಯೆ ಕಡಿಮೆಯಾಗುತ್ತದೆ. ಆದುದರಿಂದ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು ಎಂದರು.

ಮುಂದುವರೆದು ಮಾತನಾಡಿದ ಶ್ರೀ. ಬಿ.ಎನ್. ಶಶಿಧರ ರವರು ದೂರಶಿಕ್ಷಣ ನಿರ್ದೇಶನಾಲಯದ ಆದಾಯ ರೂ.10.00 ಲಕ್ಷಗಳೆಂದು ನಿರೀಕ್ಷಿಸಲಾಗಿದೆ. ಆದರೆ, ವೆಚ್ಚ ರೂ.100.00 ಲಕ್ಷಗಳು ಏಕೆ ನಿಗದಿಪಡಿಸಲಾಗಿದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ದೂರಶಿಕ್ಷಣ ನಿರ್ದೇಶನಾಲಯವನ್ನು ಅಭಿವೃದ್ಧಿ ಪಡಿಸಿದಲ್ಲಿ, ಆಂತರಿಕ ಸಂಪನ್ಮೂಲವನ್ನು ವೃದ್ಧಿಸಬಹುದೆಂಬ ನಿರೀಕ್ಷೆಯಲ್ಲಿ ಅನುದಾನ ನಿಗದಿಪಡಿಸಿದೆ ಎಂದರು. ದೂರ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರೂ ಆಗಿರುವ ಪ್ರೊ.ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ, ಪರೀಕ್ಷಾ ವಿಭಾಗದಲ್ಲಿ ದ್ವಿಗುಣ ಅವಧಿ ಮುಗಿದ ವಿದ್ಯಾರ್ಥಿಗಳಿಗೆ ವಿಶೇಷ ಸಂದರ್ಭವೆಂದು ಪರಿಗಣಿಸಿ, ಅನುತ್ತೀರ್ಣರಾಗಿರುವ ಪತ್ರಿಕೆಗಳ ಪರೀಕ್ಷೆ ಬರೆಯಲು ಅನುಮತಿ ನೀಡುತ್ತಾರೆ. ಹಾಗೆಯೇ, ಮಾನಿಟರಿಂಗ್ ಸಮಿತಿ ಸಭೆಯ ನಿರ್ಣಯದ ಪ್ರಕಾರ ದೂರ ಶಿಕ್ಷಣದಲ್ಲಿ ಪ್ರವೇಶ ಪಡೆದಿರುವ ಕೆಲವು ವಿದ್ಯಾರ್ಥಿಗಳು, ಪ್ರಥಮ/ದ್ವಿತೀಯ ವರ್ಷ ಪೂರ್ಣಗೊಳಿಸಿದ್ದು, ವೈಯಕ್ತಿಕ ಕಾರಣಗಳು ಮತ್ತು ಕೋವಿಡ್ ಸೇರಿದಂತೆ ವಿವಿಧ ಕಾರಣಗಳಿಂದಾಗಿ ಬಾಕಿ ಉಳಿದಿರುವ ವರ್ಷಕ್ಕೆ ವಿಶೇಷ ಸಂದರ್ಭವೆಂದು ಪರಿಗಣಿಸಿ, ಅವರಿಗೆ ಮುಂದಿನ ತರಗತಿಗೆ ಪ್ರವೇಶ ನೀಡಲು ಮಾನಿಟರಿಂಗ್ ಸಮಿತಿ ಸಭೆಯಲ್ಲಿ ನಿರ್ಣಯಿಸಿದೆ. ಅಂತಹ ಸುಮಾರು 4500 ವಿದ್ಯಾರ್ಥಿಗಳಿದ್ದು, ಅವರಿಗೆ ಪ್ರವೇಶ ಪಡೆಯುವಂತೆ ಇ-ಮೇಲ್ ಹಾಗೂ ಮೊಬೈಲ್ ಮೂಲಕ ತಿಳಿಸಲಾಗಿದೆ. ಇದರಿಂದ ವಿದ್ಯಾರ್ಥಿಗಳು ಪದವಿ ಪೂರ್ಣಗೊಳಿಸಲು ಅನುಕೂಲವಾಗುತ್ತದೆ ಮತ್ತು ವಿಶ್ವವಿದ್ಯಾಲಯಕ್ಕೆ ಕೂಡ ಸುಮಾರು ರೂ.4.5 ಕೋಟಿಗಳಷ್ಟು ಆಂತರಿಕ ಸಂಪನ್ಮೂಲ ಬರುತ್ತದೆ. ಅವರಿಗೆ ನೀಡಲು ಅಗತ್ಯವಿರುವ ಸ್ಟಡಿ ಮೆಟೀರಿಯಲ್ ಕೂಡ ಲಭ್ಯವಿದ್ದು, ಅದನ್ನು ಹೊಸದಾಗಿ ಮುದ್ರಿಸುವ ಅಗತ್ಯವಿಲ್ಲ. ಇದಲ್ಲದೇ ಆನ್‌ಲೈನ್ ಮೂಲಕ ಪ್ರವೇಶ ಬಯಸಿರುವ ವಿದ್ಯಾರ್ಥಿಗಳಿಗೆ ಹಣ ಪಾವತಿಸಲು ಅವಕಾಶ ನೀಡಿದಲ್ಲಿ ರೂ.1.5 ಕೋಟಿ ಶುಲ್ಕದ ರೂಪದಲ್ಲಿ ಬರಲಿದ್ದು, ಸದರಿ ಮೊಬಲಗು ನೇರವಾಗಿ ವಿಶ್ವವಿದ್ಯಾಲಯದ ಖಾತೆಗೆ ಜಮೆಯಾಗುತ್ತದೆ ಇದರಿಂದ ಆಯವ್ಯಯದಲ್ಲಿನ ಕೊರತೆಯನ್ನು ಕಡಿಮೆ ಮಾಡಬಹುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ದೂರಶಿಕ್ಷಣದ ಅಧ್ಯಯನ ಕೇಂದ್ರಗಳಿಂದ ಬರಬೇಕಾಗಿರುವ ಬಾಕಿ ಹಣವನ್ನು ಆಯವ್ಯಯದಲ್ಲಿ ತೋರಿಸಬೇಕಾಗಿತ್ತು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ ಸಪ್ಲಿಮೆಂಟರಿ ಬಜೆಟ್‌ನಲ್ಲಿ ಕೂಡ ತೋರಿಸಬಹುದು ಎಂದರು. ಶ್ರೀ ಶಿವಕುಮಾರ್ ರವರು ಮಾತನಾಡಿ, ಬಾಕಿ ಇರುವವರಿಗೆ ರಿಯಾಯಿತಿ ನೀಡಿದಲ್ಲಿ, ಬಾಕಿ ಮೊಬಲಗನ್ನು ವಸೂಲು ಮಾಡಲು ಸಹಕಾರಿಯಾಗುತ್ತದೆ ಎಂದರು. ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯವು ಬಾಕಿ ಉಳಿಸಿಕೊಂಡಿರುವ ಅಧ್ಯಯನ ಕೇಂದ್ರದವರನ್ನು ಕರೆಸುವ ವ್ಯವಸ್ಥೆ ಮಾಡಿ. ನಾವು ಅವರೊಂದಿಗೆ ಚರ್ಚಿಸಿ, ಅವರ ಮನವೊಲಿಸಿ ಬಾಕಿ ಶುಲ್ಕ ವಸೂಲು ಮಾಡಲು ಕ್ರಮ ಕೈಗೊಳ್ಳೋಣ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರ್ ರವರು ಮಾತನಾಡಿ, ಒಂದು ವಿಶೇಷ ಸಭೆ ನಡೆಸಿ, ಸಿಂಡಿಕೇಟ್ ಸದಸ್ಯರನ್ನು ಕೂಡ ಆಹ್ವಾನಿಸಿ. ಅವರೊಂದಿಗೆ ಚರ್ಚಿಸಿ ಒಂದು ಅಂತಿಮ ರೂಪ ಕೊಡೋಣ ಎಂದರು. ಮುಂದುವರೆದು ಮಾತನಾಡಿದ ಶ್ರೀ ಶಿವಕುಮಾರ್ ರವರು ಯಾವ ಯಾವ ಅಧ್ಯಯನ ಕೇಂದ್ರಗಳಿಂದ ಎಷ್ಟು ಬಾಕಿ ಇದೆ ಎಂದರು. ದೂರಶಿಕ್ಷಣ ನಿರ್ದೇಶಕರಾದ ಪ್ರೊ. ಜಗನ್ನಾಥ ಕೆ. ಡಾಂಗೆರವರು ಮಾತನಾಡಿ, ಶುಲ್ಕ ಬಾಕಿ ಇರುವ 14 ಅಧ್ಯಯನ ಕೇಂದ್ರಗಳ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಲು ತಿಳಿಸಿದೆ. ಅವರನ್ನು ಸಂಪರ್ಕಿಸಿ ಈ ಬಗ್ಗೆ ಮಾಹಿತಿ ನೀಡಲಾಗಿದೆ. 4 ಅಧ್ಯಯನ ಕೇಂದ್ರದವರು ಕರೆ ಸ್ವೀಕರಿಸುತ್ತಿಲ್ಲ ಮತ್ತು ಸ್ಪಂದಿಸುತ್ತಿಲ್ಲ. 6 ಕೇಂದ್ರವರು ಬಾಕಿ ಹಣವನ್ನು ಪಾವತಿಸಿರುವುದಾಗಿ ತಿಳಿಸಿದ್ದಾರೆ. ಉಳಿದ 3 ಕೇಂದ್ರದವರು ಹಣ ಪಾವತಿಸಲು ಕಾಲಾವಕಾಶ ಕೇಳಿದ್ದಾರೆ. ಅಂದಾಜು ರೂ.1.00 ಕೋಟಿ ಬಾಕಿ ಬರಬಹುದು ಎಂದರು.

ಶ್ರೀ ಬಿ.ಎನ್.ಶಶಿಧರ ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಹಂಗಾಮಿಯಾಗಿ ವೈದ್ಯರನ್ನು ನಿಯಮಾನುಸಾರ ನೇಮಿಸಿಕೊಳ್ಳಬೇಕಾಗಿತ್ತು, ಈ ಬಗ್ಗೆ ಸಿಂಡಿಕೇಟ್ ಅನುಮೋದನೆ ಪಡೆಯಬೇಕಾಗಿತ್ತು ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ಸಿಬ್ಬಂದಿಗಳಿಗೆ ಪ್ರಾಥಮಿಕ ಚಿಕಿತ್ಸೆ ಒದಗಿಸಲು ವೈದ್ಯರ ಅಗತ್ಯ ತುಂಬಾ ಇದೆ. ಆದರೆ, ಎಂ.ಬಿ.ಬಿ.ಎಸ್. ಅರ್ಹತೆಯುಳ್ಳವರು ಬರುವುದು ತುಂಬಾ ಕಡಿಮೆ. ಬಂದವರು ಕೂಡ ಬಹಳ ದಿನ ಇರುವುದಿಲ್ಲ. ಈ ಹಿಂದೆ ಒಬ್ಬ ಉತ್ತಮ ಡಾಕ್ಟರ್ ಇದ್ದರು, ಅವರು ಎಂ.ಡಿ. ಪ್ರವೇಶ ಸಿಕ್ಕಿತೆಂದು ರಾಜೀನಾಮೆ ನೀಡಿ ಹೋದರು. ಇದನ್ನು ಸ್ಥಿರೀಕರಣಕ್ಕಾಗಿ ಮುಂದಿನ ಸಭೆಗೆ ಮಂಡಿಸಲಾಗುವುದು ಎಂದರು.

ಶ್ರೀ. ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ಕೆಳದಿ ಮ್ಯೂಸಿಯಂನಲ್ಲಿ ಉತ್ತಮ ಸಂಗ್ರಹಗಳಿದ್ದು, ನಿರ್ವಹಣೆಗೆ ಸಿಬ್ಬಂದಿಗಳು ಇದ್ದಾರೆಯೇ? ಎಂದರು. ಮಾನ್ಯ ಕುಲಪತಿಗಳು ಮಾತನಾಡಿ, ಒಬ್ಬರು ಮಾಡ್ಯುಲರ್ ಕಂ. ಗೈಡ್ ಖಾಯಂ ಸಿಬ್ಬಂದಿ ಇದ್ದು, ಅವರು ಏಪ್ರಿಲ್-2025ರಲ್ಲಿ ವಯೋನಿವೃತ್ತಿ ಹೊಂದಲಿದ್ದಾರೆ. ಅಲ್ಲಿಗೆ ಒಬ್ಬ ಕ್ಯುರೇಟರ್‌ನ್ನು ಹಂಗಾಮಿಯಾಗಿ ನೇಮಕ ಮಾಡಲಾಗಿತ್ತು. ಅವರು, ರಾಜೀನಾಮೆ ನೀಡಿದ್ದಾರೆ. ಈ ಹಿಂದೆ ಶ್ರೀ ಗುಂಡಾ ಜೋಯಿಸ್ ರವರು ಇದ್ದಾಗ ಮ್ಯೂಸಿಯಂ ಉತ್ತಮವಾಗಿತ್ತು. ಅಲ್ಲಿ ಬಹಳ ಅಪರೂಪದ ಹಾಗೂ ಅನನ್ಯವಾದ (unique) ಸಂಗ್ರಹಗಳಿವೆ. ಅವುಗಳನ್ನು ಸುರಕ್ಷಿತವಾಗಿ ಕಾಪಾಡುವ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಶ್ರೀಮತಿ ಸಾಕಮ್ಮ ರವರು ಮಾತನಾಡಿ ಎನ್.ಪಿ.ಎಸ್. ನೌಕರರು ವಯೋನಿವೃತ್ತಿ ಹೊಂದಿದಲ್ಲಿ ನಿವೃತ್ತಿ ವೇತನಗಳನ್ನು ನೀಡಲು ಅವಕಾಶ ಮಾಡಿಕೊಳ್ಳಲಾಗಿದೆಯೇ? ಎಂದರು. ಹಣಕಾಸು ಅಧಿಕಾರಿಗಳು ಮಾಹಿತಿ ನೀಡಿ, ಎನ್.ಪಿ.ಎಸ್. ನೌಕರರ ವಂತಿಕೆಯನ್ನು ವಿಶ್ವವಿದ್ಯಾಲಯ ಎನ್.ಪಿ.ಎಸ್. ಟ್ರಸ್ಟ್‌ಗೆ ಪಾವತಿಸುತ್ತಿದೆ. ಅವರು ನಿವೃತ್ತಿಯಾದ ನಂತರ ಟ್ರಸ್ಟ್‌ನವರೇ ನಿವೃತ್ತಿ ಸೌಲಭ್ಯಗಳನ್ನು ಪಾವತಿಸುತ್ತಾರೆ ಎಂದರು.

ಶ್ರೀ ಅರವಿಂದ ರವರು ಮಾತನಾಡಿ, ಕೊರತೆ ಬಗ್ಗೆ ಹಾಗೂ ಪಿಂಚಣಿ, ಅಭಿವೃದ್ಧಿ ಅನುದಾನದ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆ ಮುಂತಾದ ಇತ್ಯಾದಿ ನಿರೀಕ್ಷಿತ ಅನುದಾನ ಲಭ್ಯವಾಗಬಹುದೆಂಬ ಮಾಹಿತಿಗಳನ್ನು ಆಯವ್ಯಯದಲ್ಲಿ ನಮೂದಿಸಬಹುದು ಎಂದರು. ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ ಅನುದಾನ ಬರುವ ನಿರೀಕ್ಷೆ ಇಟ್ಟುಕೊಂಡು ಬಜೆಟ್ ಮಾಡಲಾಗುವುದು. ಅದು ಬಂದರೂ ಬರಬಹುದು ಅಥವಾ ಬಾರದೇ ಇರಬಹುದು. ಆದುದರಿಂದ ವಿಶ್ವವಿದ್ಯಾಲಯ ಸಲ್ಲಿಸಿರುವ ಪ್ರಸ್ತಾವನೆ ಪ್ರಕಾರ ಸರ್ಕಾರದಿಂದ ಬಿಡುಗಡೆಯಾಗಬೇಕಾಗಿರುವ ಪಿಂಚಣಿ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ

Scanned with OKEN Scanner

ವಂತಿಕೆ ಸೇರಿದಂತೆ ಇತರೆ ಅನುದಾನಗಳ ವಿವರಗಳನ್ನು Footnoteನಲ್ಲಿ ನಮೂದಿಸಬೇಕು. ಆಗ ಉಳಿಕೆ/ಹೆಚ್ಚುವರಿ ಅನುದಾನವನ್ನು ಸರ್ಕಾರದಿಂದ ಪಡೆಯಲು ಪ್ರಯತ್ನಿಸಬಹುದು. ಸರ್ಕಾರದಲ್ಲಿ ಆರ್ಥಿಕವಾಗಿ ಅನುಕೂಲವಾದಲ್ಲಿ ಅನುದಾನ ಮಂಜೂರು ಮಾಡಬಹುದು ಎಂದರು.

ಡಾ.ಮಧು ರವರು ಮಾತನಾಡಿ ವಿದ್ಯಾರ್ಥಿಗಳಿಂದ ಶುಲ್ಕರೂಪದಲ್ಲಿ ಸಂಗ್ರಹಿಸಲಾಗುವ Career Guidance, Poor Students Fund, Sprots fee, ECA ಮುಂತಾದ ಮೊಬಲಗನ್ನು ನಿಗದಿತ ಉದ್ದೇಶಗಳಿಗಾಗಿಯೇ ಪೂರ್ಣ ಪ್ರಮಾಣದಲ್ಲಿ ವೆಚ್ಚ ಮಾಡುತ್ತಿಲ್ಲ. ಆದುದರಿಂದ ಸದರಿ ಶುಲ್ಕಗಳನ್ನು ವಿಶ್ವವಿದ್ಯಾಲಯ ಅಭಿವೃದ್ಧಿ ಶುಲ್ಕ ಎಂದು ಸಂಗ್ರಹಿಸಿದಲ್ಲಿ ವಿವಿಧ ಉದ್ದೇಶಗಳ ವೆಚ್ಚ ಭರಿಸಲು ಅನುಕೂಲವಾಗುತ್ತದೆ ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ ಅತಿಥಿ ಉಪನ್ಯಾಸಕರ ವೇತನ, ಹೊರಗುತ್ತಿಗೆ ನೌಕರರ ವೇತನ, ವಿದ್ಯುಚ್ಚಕ್ತಿ, ನೀರು ಸರಬರಾಜು, ಲೇಖನ ಸಾಮಗ್ರಿ ಇತ್ಯಾದಿ ವೆಚ್ಚಗಳನ್ನು ಆಂತರಿಕ ಸಂಪನ್ಮೂಲದಿಂದಲೇ ಭರಿಸುವ ಅನಿವಾರ್ಯತೆ ಇದ್ದು, ಇದಕ್ಕಾಗಿ ಪ್ರತ್ಯೇಕ ಶುಲ್ಕ ಸಂಗ್ರಹಿಸುತ್ತಿಲ್ಲ ಎಂದರು.

ಶ್ರೀ ಎಂ. ಶಿವಕುಮಾರ್ ರವರು ಮಾತನಾಡಿ ಸದನದಲ್ಲಿ ಅನುಮೋದನೆ ಪಡೆದುಕೊಂಡು ಕೇವಲ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮಾತ್ರ ದೂರಶಿಕ್ಷಣ ಕೋರ್ಸ್‌ಗಳನ್ನು ನಡೆಸಬೇಕೆಂದು ಸರ್ಕಾರದ ಆದೇಶವಾಗಿದೆ. ಆದರೆ, ಉಳಿದ ರಾಜ್ಯ ವಿಶ್ವವಿದ್ಯಾಲಯಗಳಿಗೆ ದೂರ ಶಿಕ್ಷಣವು ಆಂತರಿಕ ಸಂಪನ್ಮೂಲದ ಪ್ರಮುಖ ಮೂಲವಾಗಿತ್ತು. ಆದುದರಿಂದ ದೂರ ಶಿಕ್ಷಣ ಕೋರ್ಸ್‌ಗಳನ್ನು ಪುನರ್ ಆರಂಭಿಸುವ ಬಗ್ಗೆ ಎಲ್ಲಾ ವಿಶ್ವವಿದ್ಯಾಲಯಗಳ ಕುಲಪತಿಗಳ ನಿಯೋಗ ಹಾಗೂ ಸಿಂಡಿಕೇಟ್ ಸದಸ್ಯರ ನಿಯೋಗ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ತೆರಳಿ ಪ್ರಸ್ತಾವನೆ ಸಲ್ಲಿಸಿ, ಮನವಿ ಮಾಡಿದಲ್ಲಿ ಸರ್ಕಾರವು ಸಕಾರಾತ್ಮಕವಾಗಿ ಸ್ಪಂದಿಸಬಹುದು ಎಂದರು. ಇದಕ್ಕೆ ಎಲ್ಲಾ ಸದಸ್ಯರು ಧ್ವನಿಗೂಡಿಸಿದರು.

ಶ್ರೀ ಬಿ.ಎನ್.ಶಶಿಧರ್ ರವರು ಮಾತನಾಡಿ ಕೇಂದ್ರ ಸರ್ಕಾರದ ಪಿ.ಎಂ.–ಉಷಾ ಯೋಜನೆಯಡಿಯಲ್ಲಿ ಪ್ರಸ್ತಾವನೆ ಕಳುಹಿಸಿದ್ದಲ್ಲಿ, ಕನಿಷ್ಠ ರೂ.20.00 ಕೋಟಿಗಳಾದರೂ ಮಂಜೂರಾಗುತ್ತಿತ್ತು ಎಂದರು. ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ ಅವಕಾಶವಿರುವೆಡೆಗಳಲ್ಲಿ ಪ್ರಸ್ತಾವನೆ ಸಿದ್ಧಪಡಿಸಿ ಅನುದಾನ ನೀಡುವ ಸಂಸ್ಥೆಗಳಿಗೆ ಸಲ್ಲಿಸಿ ಅನುದಾನ ತರಲು ಪ್ರಯತ್ನಿಸಿದಲ್ಲಿ ಸಹಕಾರಿಯಾಗುತ್ತದೆ. ಕಟ್ಟಡ ಸೇರಿದಂತೆ ಕೆಲವು ಸೌಲಭ್ಯಗಳಿಗಾಗಿ ಶಾಸಕರು, ಸಂಸದರು, ಉದ್ಯಮಿಗಳು ಸೇರಿದಂತೆ ಸಂಸ್ಥೆಗಳಿಗೆ ಪ್ರಸ್ತಾವನೆ ಸಲ್ಲಿಸಬೇಕು. ಕೆಲವು ಸಂಸ್ಥೆಗಳಲ್ಲಿ ಅವರಿಗೆ ಬರುವ ಲಾಭಾಂಶದಲ್ಲಿ ಸಾಮಾಜಿಕ ಕಾರ್ಯಗಳಿಗಾಗಿಯೇ ಅನುದಾನ ಮೀಸಲಿಟ್ಟಿರುತ್ತಾರೆ. ಅವುಗಳನ್ನು ಪಡೆಯಲು ಪ್ರಯತ್ನಿಸಬೇಕು. ಎಲ್ಲದಕ್ಕೂ ಸರ್ಕಾರವನ್ನು ಅವಲಂಬಿಸಿದರೆ ಅಭಿವೃದ್ಧಿ ಕಷ್ಟವಾಗುತ್ತದೆ ಎಂದರು.

ಶ್ರೀ ಮುಸಾವೀರ್ ಬಾಷಾ ಮತ್ತು ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ ಶಿಕ್ಷಕರು ಸ್ವಲ್ಪ ತ್ಯಾಗ ಮಾಡಬೇಕು. ವಿಶ್ವವಿದ್ಯಾಲಯದ ಆವರಣದಲ್ಲಿ/ವಿಭಾಗಗಳಲ್ಲಿ ನಡೆಯುವ ಅಧ್ಯಯನ ಮಂಡಳಿ, ಪರೀಕ್ಷಾ ಮಂಡಳಿ, ಡಾಕ್ಟರಲ್ ಕಮಿಟಿ, ಪಿಹೆಚ್.ಡಿ. ಮೌಖಿಕ ಪರೀಕ್ಷೆ ಮುಂತಾದವುಗಳಿಗೆ ಸಂಭಾವನೆ, ಗೌರವ ಸಂಭಾವನೆ, ಸ್ಥಳೀಯ ಭತ್ಯೆ ಮುಂತಾದ ರೂಪದಲ್ಲಿ ಹಣ ನೀಡುವ ಅಗತ್ಯವಿಲ್ಲ. ಇದರಿಂದ ಒಂದಷ್ಟು ಹಣ ಉಳಿಸಬಹುದು. ಈ ಬಗ್ಗೆ ಪರಿಶೀಲಿಸಿ ಎಂದರು.

**ನಿರ್ಣಯ:** **ಸುಧೀರ್ಘ ಚರ್ಚೆಯ ನಂತರ ವಿಶ್ವವಿದ್ಯಾಲಯದ 2025–26ನೇ ಸಾಲಿನ ವಾರ್ಷಿಕ ಆಯ–ವ್ಯಯ ಅಂದಾಜನ್ನು ಅನುಮೋದಿಸಿದ ಸಭೆಯು ಚರ್ಚೆಯಲ್ಲಿ ಸದಸ್ಯರುಗಳು ನೀಡಿರುವ ಸಲಹೆಯಂತೆ ಆಂತರಿಕ ಸಂಪನ್ಮೂಲ ಹೆಚ್ಚಿಸುವ ಸಲುವಾಗಿ ಸಂಪನ್ಮೂಲ ಕ್ರೋಢೀಕರಿಸಲು ಮತ್ತು ಕೆಲವು ಶೀರ್ಷಿಕೆಗಳಲ್ಲಿನ ವೆಚ್ಚಗಳನ್ನು ಕಡಿತಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದು ನಿರ್ಣಯಿಸಿತು.**

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**



Scanned with OKEN Scanner

## ಕಾಲೇಜು ಅಭಿವೃದ್ಧಿ ಪರಿಷತ್ತು

**2025–ಸಿಂ–3.02:** 2024–25ನೇ ಸಾಲಿಗೆ ಬಿ.ಇಡಿ. ಪದವಿಗೆ ಮುಂದುವರಿಕೆ ಸಂಯೋಜನೆ ಮತ್ತು ಕಾಲೇಜಿನ ಸ್ಥಳ ಬದಲಾವಣೆಗೆ ಅನುಮತಿ ನೀಡುವ ಬಗ್ಗೆ.

**ಚರ್ಚೆ:** ಕುಲಸಚಿವ (ಮೌಲ್ಯಮಾಪನ) ರವರು ವಿಷಯ ಮಂಡಿಸಿ ಮಾತನಾಡಿ, ಚಿಕ್ಕಮಗಳೂರು ನಗರದಲ್ಲಿರುವ ಎ.ವಿ.ಎಸ್. ಶಿಕ್ಷಣ ಮಹಾವಿದ್ಯಾಲಯ 2024–25ನೇ ಸಾಲಿನ ಮುಂದುವರಿಕೆ ಸಂಯೋಜನೆಗೆ ಸಂಬಂಧಪಟ್ಟಂತೆ, ಕಾಲೇಜಿಗೆ ಜಮೀನಿನ ಮಾಲೀಕತ್ವ ಇಲ್ಲದ ಕಾರಣದಿಂದ ಸ್ಥಳೀಯ ತಪಾಸಣಾ ಸಮಿತಿಯು ನಿಯಮದ ಪ್ರಕಾರ ಮುಂದುವರಿಕೆ ಸಂಯೋಜನೆಗೆ ಶಿಫಾರಸ್ಸು ಮಾಡಿರಲಿಲ್ಲ. ನಂತರದಲ್ಲಿ, ಕಾಲೇಜಿನ ಆಡಳಿತ ಮಂಡಳಿಯವರು ಸಂಸ್ಥೆಯು ಬೇರೆ ಕಟ್ಟಡವನ್ನು 30 ವರ್ಷಗಳ ಒಪ್ಪಂದದ ಕ್ರಯಪತ್ರ ಸಲ್ಲಿಸಿ ಮರು ಸಂಯೋಜನೆಗೆ ಕೋರಿತ್ತು. ಇದನ್ನು ಸರ್ಕಾರದ ಅವಗಾಹನೆಗೆ ತರುವುದರ ಮೂಲಕ ಕಾಲೇಜನ್ನು ಹೊಸ ಕಟ್ಟಡಕ್ಕೆ ಸ್ಥಳಾಂತರ ಮಾಡಿರುವುದರಿಂದ ಮರು ತಪಾಸಣೆ ನಡೆಸಿ ಮುಂದುವರಿಕೆ ಸಂಯೋಜನೆ ನೀಡಲು ಅನುಮತಿ ಕೋರಲಾಗಿತ್ತು. ಸರ್ಕಾರವು ಅನುಮತಿ ನೀಡಿದ ನಂತರ ದಿನಾಂಕ:15–01–2025ರಂದು ಸ್ಥಳೀಯ ತಪಾಸಣಾ ಸಮಿತಿಯು ಕಾಲೇಜಿಗೆ ಭೇಟಿ ನೀಡಿ ಸಲ್ಲಿಸಿದ್ದ ವರದಿಯನ್ನು ಪ್ರಾಧಿಕಾರಗಳ ಅನುಮೋದನೆ ಕಾಯ್ದಿರಿಸಿ, ಕಾಲೇಜಿನ ಸ್ಥಳ ಬದಲಾವಣೆಗೆ ಅನುಮತಿ ಮತ್ತು ಮುಂದುವರಿಕೆ ಸಂಯೋಜನೆಗೆ ಅನುಮತಿ ನೀಡುವಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು. ಇದನ್ನು ಸಭೆಯ ಅನುಮೋದನೆಗೆ ಮಂಡಿಸಲಾಗಿದೆ ಎಂದರು.

ಶ್ರೀ ಬಿ.ಎನ್. ಶಶಿಧರ ರವರು ಮಾತನಾಡಿ, ಕಾಲೇಜಿನ ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ. ಅನುಮತಿ ಅಗತ್ಯವಿದ್ದು, ಅನುಮತಿ ಬಂದ ನಂತರ ಅನುಮೋದನೆ ನೀಡಬಹುದು ಎಂದರು. ಪ್ರೊ. ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ ಕಾಲೇಜಿನ ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ. ಅನುಮತಿ ಅಗತ್ಯವಿದೆ ಎಂದರು. ಡಾ. ಮಧು ರವರು ಮಾತನಾಡಿ ವಿಶ್ವವಿದ್ಯಾಲಯವು ಸಿಂಡಿಕೇಟ್ ಅನುಮೋದನೆ ಕಾಯ್ದಿರಿಸಿ, ಈಗಾಗಲೇ ಆದೇಶ ಹೊರಡಿಸಿದೆ. ಆದರೆ, 2014ರ ಎನ್.ಸಿ.ಟಿ.ಇ. ನಿಯಮಗಳ ಪ್ರಕಾರ ಬಿ.ಇಡಿ. ಕಾಲೇಜುಗಳ ಹೆಸರು ಬದಲಾವಣೆ ಹಾಗೂ ಸ್ಥಳ ಬದಲಾವಣೆಗೆ ಎನ್.ಸಿ.ಟಿ.ಇ. ಅನುಮತಿ ಅಗತ್ಯ ವಿಶ್ವವಿದ್ಯಾಲಯದಲ್ಲಿ ಕೆಲವು ಪ್ರಕರಣಗಳಲ್ಲಿ ಎನ್.ಸಿ.ಟಿ.ಇ. ಅನುಮತಿ ಇಲ್ಲದೇ ಅನುಮೋದನೆ ನೀಡಿದ್ದಾರೆ ಎಂದರು.

**ನಿರ್ಣಯ:** ಸುಧೀರ್ಘವಾಗಿ ಚರ್ಚಿಸಿದ ನಂತರ, ನಿಯಮಗಳನ್ನು ಮತ್ತೊಮ್ಮೆ ಪರಿಶೀಲಿಸಿ, ಅಗತ್ಯವಿದ್ದಲ್ಲಿ ಈ ಬಗ್ಗೆ ಎನ್.ಸಿ.ಟಿ.ಇ. ಯಿಂದ ಸ್ಪಷ್ಟನೆ ಪಡೆದುಕೊಂಡು ಮುಂದಿನ ಸಭೆಗೆ ಮಂಡಿಸುವಂತೆ ವಿಷಯವನ್ನು ಮುಂದೂಡಲಾಯಿತು.

## ಪರೀಕ್ಷಾ ವಿಭಾಗ

**2025–ಸಿಂ–3.03:** ಏಕರೂಪ ಪರೀಕ್ಷಾ ಸಂಭಾವನೆ ಮತ್ತು ಇತರೆ ಭತ್ಯೆ/ಸಂಭಾವನೆಗಳನ್ನು ಅಳವಡಿಸಿಕೊಳ್ಳುವ ಬಗ್ಗೆ.

**ಚರ್ಚೆ:** ಕುಲಸಚಿವ(ಮೌಲ್ಯಮಾಪನ) ರವರು ವಿಷಯ ಮಂಡಿಸಿ ಮಾತನಾಡುತ್ತಾ, ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಏಕರೂಪದ ಶುಲ್ಕ ಮತ್ತು ಸಂಭಾವನೆಗಳನ್ನು ನಿಗದಿಪಡಿಸಿ ದಿನಾಂಕ:16–10–2023 ರಂದು ಸುತ್ತೋಲೆ ಹೊರಡಿಸಿರುತ್ತದೆ. ಅದರಂತೆ ದಿನಾಂಕ:02–12–2023 ರಂದು ನಡೆದ ಸಿಂಡಿಕೇಟ್ ಸಭೆಯ ವಿಷಯ ಸಂಖ್ಯೆ:2023–ಸಿಂ–7.11ರಲ್ಲಿ ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ಕರ್ನಾಟಕ ಸರ್ಕಾರದ ಏಕರೂಪ ಶುಲ್ಕ ಮತ್ತು ಸಂಭಾವನೆ ದರಗಳನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಯಥಾವತ್ತಾಗಿ ಅಳವಡಿಸಿಕೊಳ್ಳಲು ನಿರ್ಣಯಿಸಿರುತ್ತದೆ. ಆದರೆ ಏಕರೂಪ ಪ್ರವೇಶ ಶುಲ್ಕಗಳನ್ನು ಅಳವಡಿಸಿಕೊಂಡಲ್ಲಿ ಹೆಚ್ಚಿನ ಆರ್ಥಿಕ ಹೊರೆ ಭರಿಸುವುದು



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

Scanned with OKEN Scanner

ಕಷ್ಟವಾಗುತ್ತದೆ ಎಂದು ಕಾಲೇಜುಗಳು, ಪೋಷಕರು ಮತ್ತು ವಿದ್ಯಾರ್ಥಿಗಳಿಂದ ಕೋರಿಕೆ ಬಂದಿದ್ದರಿಂದ ಅದು ಅನುಷ್ಠಾನಗೊಳ್ಳಲಿಲ್ಲ. ಈ ಹಿನ್ನೆಲೆಯಲ್ಲಿ, ಪರೀಕ್ಷಾ ಸಂಭಾವನೆಯ ಬಿಲ್ಲುಗಳನ್ನು ಹಳೆಯ ದರದಲ್ಲಿಯೇ ಪಾವತಿಗಾಗಿ ಹಣಕಾಸು ವಿಭಾಗಕ್ಕೆ ಸಲ್ಲಿಸಲಾಗುತ್ತಿತ್ತು. ಆದರೆ ಸರ್ಕಾರವು ಏಕರೂಪದ ಶುಲ್ಕ ಮತ್ತು ಸಂಭಾವನೆ ದರಗಳನ್ನು ಜಾರಿಗೊಳಿಸಿದ್ದು, ಅದರ ಪ್ರಕಾರವೇ ಬಿಲ್ಲುಗಳನ್ನು ಸಲ್ಲಿಸಿದಲ್ಲಿ ಮಾತ್ರ ಪಾವತಿಸುವುದಾಗಿ ತಡೆ ಹಿಡಿದಿದ್ದಾರೆ. ಅಲ್ಲದೇ ಸರ್ಕಾರವು ನಿಗದಿಪಡಿಸಿರುವುದರಲ್ಲಿ ಕೆಲವು ಶುಲ್ಕ ಮತ್ತು ಸಂಭಾವನೆಗಳು ಇರುವುದಿಲ್ಲ. ಅವುಗಳನ್ನು ಅನುಬಂಧ–2ರಲ್ಲಿ ಒದಗಿಸಲಾಗಿದ್ದು, ಅಳವಡಿಸಿಕೊಳ್ಳುವ ಅಗತ್ಯವಿದೆ. ಸರ್ಕಾರದ ಏಕರೂಪದ ಶುಲ್ಕ ಮತ್ತು ಸಂಭಾವನೆಗಳನ್ನು ಅಳವಡಿಸಿಕೊಂಡಲ್ಲಿ ಪ್ರವೇಶ ಹಾಗೂ ಪರೀಕ್ಷಾ ಶುಲ್ಕಗಳು ಸೇರಿದಂತೆ ಬಹಳಷ್ಟು ಶುಲ್ಕಗಳಲ್ಲಿ ಹೆಚ್ಚಳವಾಗುವುದರಿಂದ ವಿಶ್ವವಿದ್ಯಾಲಯಕ್ಕೆ ಆಂತರಿಕ ಸಂಪನ್ಮೂಲ ಕೂಡ ವೃದ್ಧಿಯಾಗುತ್ತದೆ. ಆದುದರಿಂದ, ಸರ್ಕಾರದ ಏಕರೂಪ ಪರೀಕ್ಷಾ ಸಂಭಾವನೆ ಮತ್ತು ಇತರೆ ಭತ್ಯೆ/ಸಂಭಾವನೆಗಳನ್ನು ಅಳವಡಿಸಿಕೊಳ್ಳುವ ಕುರಿತು ಸಭೆಯ ಅನುಮೋದನೆಗಾಗಿ ಮಂಡಿಸಿದೆ ಎಂದರು.

ಪ್ರೊ.ಜಗನ್ನಾಥ ಕೆ. ಡಾಂಗೆ ರವರು ಮಾತನಾಡಿ ಬೇರೆ ವಿಶ್ವವಿದ್ಯಾಲಯಗಳಿಗೆ ಹೋಲಿಸಿದಲ್ಲಿ ನಮ್ಮ ವಿಶ್ವವಿದ್ಯಾಲಯದ ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶ ಶುಲ್ಕಗಳು ಬಹಳ ಕಡಿಮೆ ಇದೆ ಎಂದರು. ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ ಎಲ್ಲಾ ಕೋರ್ಸ್‌ಗಳಿಗೆ ಶುಲ್ಕ ಹೆಚ್ಚಿಸಿದಲ್ಲಿ ಇದರಿಂದಾಗುವ ಆರ್ಥಿಕ ಹೊರೆಯನ್ನು ಭರಿಸುವುದು ಬಡ ವಿದ್ಯಾರ್ಥಿಗಳಿಗೆ ಕಷ್ಟವಾಗುತ್ತದೆ. ಆದುದರಿಂದ ಬಹು ಬೇಡಿಕೆ ಇರುವ ಕೋರ್ಸ್‌ಗಳ ಪ್ರವೇಶ ಶುಲ್ಕಗಳನ್ನು ಮಾತ್ರ ಪರಿಷ್ಕರಿಸಬಹುದು ಎಂದರು. ಶ್ರೀ ಶಿವಕುಮಾರ್ ರವರು ಮಾತನಾಡಿ, ಸರ್ಕಾರದ ಆದೇಶದನ್ವಯ ಕೆಲವು ಕೋರ್ಸ್‌ಗಳ ಪ್ರವೇಶ ಶುಲ್ಕಗಳನ್ನು ಮಾತ್ರ ಪರಿಷ್ಕರಿಸಲು ಅವಕಾಶವಿಲ್ಲ ಎಂದರು.

**ನಿರ್ಣಯ:** ಸುದೀರ್ಘವಾಗಿ ಚರ್ಚಿಸಿದ ನಂತರ ಏಕರೂಪ ಪರೀಕ್ಷಾ ಸಂಭಾವನೆ ಮತ್ತು ಇತರೆ ಭತ್ಯೆ/ಸಂಭಾವನೆಗಳನ್ನು ಅಳವಡಿಸಿಕೊಳ್ಳಲು ಅನುಮತಿಸಿದ ಸಭೆಯು, ಸರ್ಕಾರದ ಆದೇಶದಲ್ಲಿ ಇಲ್ಲದ ಹಾಗೂ ಈ ಹಿಂದೆಯೇ ವಿಶ್ವವಿದ್ಯಾಲಯವು ಅಳವಡಿಸಿಕೊಂಡಿರುವ ಶುಲ್ಕ ಮತ್ತು ಸಂಭಾವನೆಗಳನ್ನು ಅಳವಡಿಸಿಕೊಳ್ಳಲು ನಿರ್ಣಯಿಸಿತು. ಮುಂದುವರೆದು, ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸಬೇಕಾಗಿರುವ ಹಿನ್ನೆಲೆಯಲ್ಲಿ, ಸ್ನಾತಕ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ರಾಜ್ಯ ಸರ್ಕಾರದ ಏಕ ರೂಪದ ಪ್ರವೇಶ ಶುಲ್ಕಗಳನ್ನು ಅಳವಡಿಸಿಕೊಳ್ಳುವ ಕುರಿತಾಗಿ ವಿವರವಾದ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಅಥವಾ ಸಾಧ್ಯವಾದರೆ, ಈ ವಿಷಯಕ್ಕಾಗಿಯೇ ವಿಶೇಷ ಸಿಂಡಿಕೇಟ್ ಸಭೆಯನ್ನು ನಡೆಸಿ, ಸಭೆಯ ಅನುಮೋದನೆ ಪಡೆದುಕೊಂಡು, 2025–26ನೇ ಶೈಕ್ಷಣಿಕ ಸಾಲಿನಿಂದಲೇ ಅಳವಡಿಸಿಕೊಳ್ಳಲು ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ನಿರ್ಣಯಿಸಿತು.

## ಮಾನವ ಸಂಪನ್ಮೂಲ ನಿರ್ವಹಣೆ ವಿಭಾಗ

**2025–ಸಿಂ–3.04:** **ವಿಶ್ವವಿದ್ಯಾಲಯದಲ್ಲಿ ಹಂಗಾಮಿ ಸಂಚಿತ ವೇತನದಡಿ ಕಾರ್ಯನಿರ್ವಹಿಸುತ್ತಿರುವ 04 ಜನ ವಾಹನ ಚಾಲಕರ ವೇತನ ಪರಿಷ್ಕರಣೆಯ ಕುರಿತು.**

**ಚರ್ಚೆ:** ಕುಲಸಚಿವ (ಮೌಲ್ಯಮಾಪನ) ರವರು ವಿಷಯ ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಹಂಗಾಮಿಯಾಗಿ ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ 04 ಜನ ವಾಹನ ಚಾಲಕರನ್ನು ಹೊರಗುತ್ತಿಗೆ ಮೂಲಕ ನೇಮಕಾತಿ ಮಾಡಿಕೊಳ್ಳಲು ಹೊರಡಿಸಲಾದ ಆದೇಶಕ್ಕೆ, ಅವರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು "Respondents to



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

Scanned with OKEN Scanner

continue the petitioners against sanctioned vacant Non Teaching Post as has been done in terms of the order dated:17-08-2022 and pay their arrears of salary and emoluments from 01-04-2024 with a further direction to pay the same every month in future during the pendency of the writ petition" ಎಂದು ನಿರ್ದೇಶನ ನೀಡಿರುವ ಹಿನ್ನೆಲೆಯಲ್ಲಿ, ಸದರಿ 04 ಜನ ವಾಹನ ಚಾಲಕರನ್ನು ಹಂಗಾಮಿ ಸೇವೆಯಲ್ಲಿ ಮುಂದುವರೆಸಿ, ಈ ಹಿಂದೆ ನೀಡುತ್ತಿದ್ದ ವೇತನವನ್ನು ಪಾವತಿಸಲಾಗುತ್ತಿದೆ. ಸರ್ಕಾರಿ ನೌಕರರಿಗೆ ರಾಜ್ಯ ಸರ್ಕಾರವು 7ನೇ ವೇತನ ಶ್ರೇಣಿಯನ್ನು ಮಂಜೂರು ಮಾಡಿದ್ದು, ವೇತನ ಶ್ರೇಣಿಯ ಆದೇಶದಲ್ಲಿ, ಇದು ಹಂಗಾಮಿ ನೌಕರರಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಲಾಗಿದೆ. ಆದರೆ, ಹಂಗಾಮಿ ವಾಹನ ಚಾಲಕರು ಮನವಿ ಸಲ್ಲಿಸಿ, ಕರ್ನಾಟಕ ಸರ್ಕಾರದ ನಡವಳಿಯಲ್ಲಿ ಮಾನ್ಯ ಮುಖ್ಯಮಂತ್ರಿಯವರು/ ಮಾನ್ಯ ಉಪಮುಖ್ಯಮಂತ್ರಿಯವರು/ ಮಾನ್ಯ ಸಚಿವರುಗಳು/ ಮಾನ್ಯ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿಗಳ/ ಸಲಹೆಗಾರರ/ ಸಂಪುಟ ದರ್ಜೆ ಸ್ಥಾನಮಾನ ಹಾಗೂ ಸಚಿವರ ಸ್ಥಾನಮಾನ ಪಡೆದ ಪ್ರಾಧಿಕಾರಗಳ ಮತ್ತು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರು/ ಉಪಾಧ್ಯಕ್ಷರ ಆಪ್ತ ಶಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನ ಅನ್ವಯ ಸಂಚಿತ ವೇತನವನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರವು ಅಧಿಸೂಚನೆ ಹೊರಡಿಸಿದ್ದು, ಈ ಅಧಿಸೂಚನೆಯನ್ವಯ ತಮಗೂ 7ನೇ ವೇತನ ಮಂಜೂರು ಮಾಡುವಂತೆ ಕೋರಿದ್ದಾರೆ. ಆದುದರಿಂದ, ವಾಹನ ಚಾಲಕರಿಗೆ 6ನೇ ವೇತನ ಶ್ರೇಣಿಯನ್ನು ಪರಿಷ್ಕರಿಸಿ, 7ನೇ ವೇತನ ಶ್ರೇಣಿಯನ್ನು ಮಂಜೂರು ಮಾಡಿ ಪಾವತಿಸುವ ಕುರಿತು ಸಭೆಯ ಅನುಮೋದನೆಗೆ ಮಂಡಿಸಿದೆ ಎಂದರು.

ಶ್ರೀ ಮುಸಾವೀರ್ ಬಾಷಾ, ಶ್ರೀ ಲಕ್ಷ್ಮಿಕಾಂತ ಚಿಮನೂರು ಹಾಗೂ ಶ್ರೀ ಅರವಿಂದ ರವರು ಮಾತನಾಡಿ, ಸದರಿ ವಾಹನ ಚಾಲಕರು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳು ಸೇರಿದಂತೆ ಶಾಸನಬದ್ಧ ಅಧಿಕಾರಿಗಳೊಂದಿಗೆ ಹಾಗೂ ಅಂಬುಲೆನ್ಸ್‌ನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಆದುದರಿಂದ ಅವರನ್ನು ಖಾಯಂಗೊಳಿಸುವ ಬಗ್ಗೆ ಪರಿಶೀಲಿಸಿ ಎಂದರು. ಹಣಕಾಸು ಅಧಿಕಾರಿಗಳು ಮಾತನಾಡಿ, ಹಂಗಾಮಿ ವಾಹನ ಚಾಲಕರ ವೇತನವನ್ನು ವಿಶ್ವವಿದ್ಯಾಲಯದ ಆಂತರಿಕ ಸಂಪನ್ಮೂಲದಿಂದ ಭರಿಸಿ ಪಾವತಿಸಲಾಗುತ್ತಿದೆ. ಖಾಯಂ ಆಗಿ ನೇಮಕಗೊಂಡಲ್ಲಿ ಅವರ ವೇತನವು ಸರ್ಕಾರದಿಂದ ಬರುವುದರಿಂದ ವಿಶ್ವವಿದ್ಯಾಲಯಕ್ಕೆ ಆರ್ಥಿಕ ಹೊರೆ ಕಡಿಮೆಯಾಗುತ್ತದೆ ಎಂದರು. ಮಾನ್ಯ ಕುಲಪತಿಯವರು ಮಾತನಾಡಿ, ವಾಹನ ಚಾಲಕರು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು, ಅವರ ಸೇವೆಯನ್ನು ಖಾಯಂಗೊಳಿಸುವ ಕುರಿತಾಗಿ ಲಭ್ಯವಿರುವ ನ್ಯಾಯಾಲಯಗಳ ತೀರ್ಪುಗಳು, ಸರ್ಕಾರಗಳ ಆದೇಶಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

**ನಿರ್ಣಯ:** **ಚರ್ಚೆಯ ನಂತರ ಸರ್ಕಾರದ ವಿವಿಧ ಸಚಿವರು, ಪ್ರಾಧಿಕಾರಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಆಪ್ತ ಶಾಖೆಗಳಲ್ಲಿ ಗುತ್ತಿಗೆ ಆಧಾರದಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ 7ನೇ ವೇತನ ಆಯೋಗದ ಶಿಫಾರಸ್ಸಿನನ್ವಯ ಸಂಚಿತ ವೇತನವನ್ನು ಪರಿಷ್ಕರಿಸಿರುವಂತೆ, ವಿಶ್ವವಿದ್ಯಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 04 ಜನ ಹಂಗಾಮಿ ವಾಹನ ಚಾಲಕರಿಗೆ ಕರ್ನಾಟಕ ಸರ್ಕಾರದ 7ನೇ ವೇತನ ಆಯೋಗದ ಶಿಫಾರಸ್ಸಿನಂತೆ ಮೂಲ ವೇತನಕ್ಕೆ ರೂ.10/-ಗಳನ್ನು ಕಡಿತಗೊಳಿಸಿ ಮೂಲ ವೇತನದ ಜೊತೆಗೆ ಲಭ್ಯವಿರುವ ದಿನಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆಯನ್ನು ಪಾವತಿಸಲು ಸಭೆಯು ನಿರ್ಣಯಿಸಿತು.**

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**



Scanned with OKEN Scanner

025–ಸಿಂ–3.05: ಕುವೆಂಪು ವಿಶ್ವವಿದ್ಯಾಲಯದ ವಿದ್ಯಾರ್ಥಿನಿಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು ಖಾಯಂಗೊಳಿಸುವ ಕುರಿತು.

ಚರ್ಚೆ: ಕುಲಸಚಿವ (ಮೌಲ್ಯಮಾಪನ) ರವರು ವಿಷಯವನ್ನು ಮಂಡಿಸಿ ಮಾತನಾಡುತ್ತಾ, ವಿಶ್ವವಿದ್ಯಾಲಯದ ಹಾಸ್ಟೆಲ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ 'ಡಿ' ಗ್ರೂಪ್ ನೌಕರರಾದ ಶ್ರೀಮತಿ ವಿಮಲಮ್ಮ, ಶ್ರೀ ಕಣ್ಣನ್, ಶ್ರೀ ನಾರಾಯಣ ಸ್ವಾಮಿ ಮತ್ತು ಕಿರಿಯ ಸಹಾಯಕರಾದ ಶ್ರೀ ರುದ್ರಪ್ಪ, ಎಂ. ಇವರುಗಳು ವಿಶ್ವವಿದ್ಯಾಲಯದ ಸೇವೆಯಲ್ಲಿ ತಮ್ಮನ್ನು ಖಾಯಂಗೊಳಿಸುವಂತೆ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್‌ಪಿಟಿಷನ್ ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ:09–09–2024 ರಂದು ಹೊರಡಿಸಿರುವ ಆದೇಶದಂತೆ ಕ್ರಮ ಕೈಗೊಳ್ಳುವ ಸಂಬಂಧ ಸದರಿಯವರು ವಿಶ್ವವಿದ್ಯಾಲಯದ ಸಿಬ್ಬಂದಿಗಳಾಗಿರುವುದರಿಂದ, ಅವರುಗಳ ಮನವಿಗಳನ್ನು ಮತ್ತು ನ್ಯಾಯಾಲಯದ ಆದೇಶವನ್ನು ಕೂಲಂಕಷವಾಗಿ ಪರಿಶೀಲಿಸಿ, ಇವರನ್ನು ದಿನಗೂಲಿ ಆಧಾರದ ಮೇಲೆ ನೇಮಕ ಮಾಡಿಕೊಂಡಿರುವ ಆದೇಶದ ಪ್ರತಿ ಮತ್ತು ಸೇವಾ ವಿವರಗಳ ದಾಖಲೆಗಳೊಂದಿಗೆ ಈ ನೌಕರರನ್ನು ಖಾಯಂಗೊಳಿಸುವ ಕುರಿತು ವಿಶ್ವವಿದ್ಯಾಲಯದ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯವರು ವಿಶ್ವವಿದ್ಯಾಲಯಕ್ಕೆ ಬರೆದಿರುವ ದಿನಾಕ:07–12–2024 ಮತ್ತು 17–01–2025ರ ಪತ್ರಗಳಲ್ಲಿ ತಿಳಿಸಿರುತ್ತಾರೆ.

ಪರಿಶೀಲಿಸಲಾಗಿ, ಸದರಿ ನೌಕರರು 1994 ರಿಂದಲೂ ಹಾಸ್ಟೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ವಿದ್ಯಾರ್ಥಿನಿಲಯದ ಶಿಕ್ಷಕ ಸಲಹೆಗಾರರೇ ಅವರುಗಳನ್ನು ನೇಮಕ ಮಾಡಿ ಆದೇಶ ಹೊರಡಿಸಿದ್ದಾರೆ. ಅವರುಗಳ ವಿಲೀನೀಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ:30–03–2010, 04–05–2010 ಮತ್ತು ದಿನಾಂಕ:14–05–2010 ರಂದು ನಡೆದ ಸಿಂಡಿಕೇಟ್ ಸಭೆಗಳಲ್ಲಿ ವಿದ್ಯಾರ್ಥಿನಿಲಯ ಮತ್ತು ಗಾರ್ಡನ್‌ಗಳಲ್ಲಿ ದಿನಾಂಕ:03–01–2006ಕ್ಕೆ 10 ವರ್ಷಗಳಿಗೂ ಹೆಚ್ಚು ವರ್ಷ ಸೇವೆ ಪೂರೈಸಿ ಕರ್ತವ್ಯ ನಿರ್ವಹಿಸುತ್ತಿದ್ದ 15ಜನ ನೌಕರರನ್ನು ವಿಶ್ವವಿದ್ಯಾಲಯದಲ್ಲಿ ಖಾಲಿ ಇರುವ 'ಡಿ' ದರ್ಜೆಯ ಹುದ್ದೆಗಳಿಗೆದುರಾಗಿ ವಿಲೀನೀಕರಣಗೊಳಿಸಲು ಅನುಮತಿ ನೀಡುವಂತೆ ಸರ್ಕಾರಕ್ಕೆ ದಿನಾಂಕ:27–11–2010 ರಂದು ಬರೆಯಲಾದ ಪತ್ರಕ್ಕೆ ಸರ್ಕಾರವು ವಿದ್ಯಾರ್ಥಿನಿಲಯ ಮತ್ತು ಗಾರ್ಡನ್‌ಗಳಲ್ಲಿ ಹಂಗಾಮಿಯಾಗಿ ಕರ್ತವ್ಯನಿರ್ವಹಿಸುತ್ತಿರುವ ನೌಕರರುಗಳ ಸೇವೆಯನ್ನು ಸಕ್ರಮಗೊಳಿಸಲು ಅವಕಾಶವಿಲ್ಲವೆಂದು ಸರ್ಕಾರವು ದಿನಾಂಕ:09–02–2012 ಮತ್ತು 08–03–2012ರ ಪತ್ರದಲ್ಲಿ ತಿಳಿಸಿರುತ್ತದೆ. ಪ್ರಸ್ತುತ ರಾಜ್ಯ ಉಚ್ಚ ನ್ಯಾಯಾಲಯವು ತನ್ನ ಆದೇಶದಲ್ಲಿ The impugned endorsenment bearing no. ಸಿಆಸುಇ 273 ಸೇನಿಸಿ2011 / ಇಡಿ 36 ಯುಎಸ್‌ವಿ 2011 ದಿನಾಂಕ:09–02–2012 issued by the Respondent No.2 is quashed ಹಾಗೂ the decision of the Hon'ble Apex Court in the case of State of Karnataka and others vs M.L.Kesari [(2010) 9 SCC 247], Narendra Kumar Tiwari vs State of Jharkhand [(2018) 8 SCC 238] and take appropriate decision to regularize the services of the petitioners within three months thereafter, in accordance with law ಎಂದು ತೀರ್ಪು ನೀಡಿರುತ್ತದೆ.

ಈ ಹಿನ್ನೆಲೆಯಲ್ಲಿ ನ್ಯಾಯಾಲಯದ ತೀರ್ಪಿನ ಅನ್ವಯ ಹಾಸ್ಟೆಲ್‌ನಲ್ಲಿ ಕಾರ್ಯನಿರ್ವಹಿಸುತ್ತಿರುವ 04 ಜನ ನೌಕರರನ್ನು ಖಾಯಂಗೊಳಿಸುವ ಕುರಿತು ಸರ್ಕಾರಕ್ಕೆ ಪತ್ರದ ಮೂಲಕ ಅಭಿಪ್ರಾಯವನ್ನು ತಿಳಿಸುವ ಸಲುವಾಗಿ ಸಭೆಯ ನಿರ್ಣಯಕ್ಕಾಗಿ ಮಂಡಿಸಿದೆ ಎಂದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

ಶ್ರೀ ಶಿವಕುಮಾರ್ ರವರು ಮಾತನಾಡಿ ನ್ಯಾಯಾಲಯದ ಆದೇಶಗಳನ್ನು ಪರಿಶೀಲಿಸುವ ಅಗತ್ಯವಿದೆ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರು, ಶ್ರೀ ಅರವಿಂದ, ಶ್ರೀ ಬಿ.ಎನ್.ಶಶಿಧರ, ಡಾ.ಮಧು, ಜಿ. ರವರು ಮಾತನಾಡಿ, ಸದರಿ ನೌಕರರು ಸುಮಾರು 30 ವರ್ಷಗಳಿಗಿಂತಲೂ ಹೆಚ್ಚಿನ ಅವಧಿಯಿಂದ ಕಾರ್ಯನಿರ್ವಹಿಸುತ್ತಿದ್ದು, ಈಗ ನಿವೃತ್ತಿಯ ಅಂಚಿನಲ್ಲಿದ್ದಾರೆ. ಈ ಅವಧಿಯಲ್ಲಾದರೂ ಅವರಿಗೆ ಅನುಕೂಲವಾಗುವುದರಿಂದ ಸರ್ಕಾರಕ್ಕೆ ಸಕಾರಾತ್ಮಕವಾಗಿ ಶಿಫಾರಸ್ಸು ಮಾಡಬಹುದು ಎಂದರು.

ನಿರ್ಣಯ: ಸುದೀರ್ಘ ಚರ್ಚೆಯ ನಂತರ, ಮಾನ್ಯ ನ್ಯಾಯಾಲಯದ ಆದೇಶದನ್ವಯ ಹಾಸ್ಟೆಲ್‌ಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 04 ಜನ ನೌಕರರನ್ನು ವಿಶ್ವವಿದ್ಯಾಲಯಕ್ಕೆ ಮಂಜೂರಾಗಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಖಾಯಂಗೊಳಿಸಬಹುದಾಗಿದೆ ಎಂಬ ಅಭಿಪ್ರಾಯದೊಂದಿಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯು ನಿರ್ಣಯಿಸಿತು.

**2025–ಸಿಂ–3.06: ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು**

**2025–ಸಿಂ–3.06(1):** <u>ಶ್ರೀ ಮುಸಾವೀರ್ ಬಾಷಾ:</u> ಆರೋಗ್ಯ ಕೇಂದ್ರದ ತಾಂತ್ರಿಕ ಸಿಬ್ಬಂದಿಗಳ ವೇತನ ಹೆಚ್ಚಳದ ಬಗ್ಗೆ:

ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ ಹಿಂದಿನ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಿರುವ ಪ್ರಕಾರ ಆರೋಗ್ಯ ಕೇಂದ್ರದ ತಾಂತ್ರಿಕ ಸಿಬ್ಬಂದಿಗಳ ವೇತನ ಹೆಚ್ಚಿಸಿ ಆದೇಶ ಹೊರಡಿಸುವಂತೆ ಕೋರಿದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ, ದಿನಾಂಕ:07-03-2025ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ಆರೋಗ್ಯ ಕೇಂದ್ರದಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ನರ್ಸ್, ಫಾರ್ಮಾಸಿಸ್ಟ್ ಹಾಗೂ ಲ್ಯಾಬ್ ಟೆಕ್ನೀಷಿಯನ್ ಗೌರವ ಸಂಭಾವನೆಯಾಗಿ ಪಾವತಿಸುವ ಕುರಿತಾಗಿ ರಾಜ್ಯದ ಬೇರೆ ವಿಶ್ವವಿದ್ಯಾಲಯ, ಇಲಾಖೆ ಹಾಗೂ ಸಂಸ್ಥೆಗಳಲ್ಲಿ ಆರೋಗ್ಯ ಕೇಂದ್ರದ ಸಿಬ್ಬಂದಿಗಳಿಗೆ ಪಾವತಿಸುತ್ತಿರುವ ವೇತನದ ಕುರಿತಾಗಿ ಮಾಹಿತಿ ಪಡೆದು, ಮಾಹಿತಿಗಳು ಬಂದ ನಂತರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸುವುದು ಎಂದು ನಿರ್ಣಯವಾಗಿದೆ ಎಂದರು. ಶ್ರೀ ಮುಸಾವೀರ್ ಬಾಷಾ ರವರು ಮಾತನಾಡಿ, ಬೇರೆ ವಿಶ್ವವಿದ್ಯಾಲಯಗಳು, ಸಂಸ್ಥೆಗಳು ಮತ್ತು ಇಲಾಖೆಗಳಿಂದ ಮಾಹಿತಿ ಬಾರದಿದ್ದಲ್ಲಿ ತೊಂದರೆಯಾಗುತ್ತದೆ. ಆದುದರಿಂದ ನೀವೇ ಜಾರಿಗೊಳಿಸಿ ಬೇರೆಯವರಿಗೆ ಮಾದರಿಯಾಗಿ ಎಂದರು. ಶ್ರೀ ಲಕ್ಷ್ಮಿಕಾಂತ ಚಿಮನೂರು ಮತ್ತು ಪ್ರೊ. ಜೆ. ನಾರಾಯಣ ರವರು ಮಾತನಾಡಿ ಸರ್ಕಾರದಿಂದಲೇ ವೈದ್ಯರು ಸೇರಿದಂತೆ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಮತ್ತು ಸರ್ಕಾರದಿಂದ ಆರೋಗ್ಯ ಕೇಂದ್ರ ತೆರೆಯುವಂತೆ ಕೋರಬಹುದು ಎಂದರು. ವೈದ್ಯಾಧಿಕಾರಿಗಳನ್ನು ನಿಯೋಜಿಸುವಂತೆ ಮತ್ತು ಆರೋಗ್ಯ ಕೇಂದ್ರಕ್ಕೆ ಅಗತ್ಯವಿರುವ ಔಷಧಿಗಳು ಹಾಗೂ ಲ್ಯಾಬ್ ಕೆಮಿಕಲ್ಸ್‌ಗಳನ್ನು ಒದಗಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ವರೆಗೂ ಯಾವುದೇ ಮಾಹಿತಿ ಬಾರದಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು.

ಮಾನ್ಯ ಕುಲಪತಿಯವರು ಮಾತನಾಡಿ, ಬೇರೆ ವಿಶ್ವವಿದ್ಯಾಲಯ ಮತ್ತು ಇಲಾಖೆಗಳಿಂದ ಮಾಹಿತಿ ಪಡೆದು ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಣಯಿಸೋಣ ಎಂದರು.

**2025–ಸಿಂ–3.06(2):** <u>ಡಾ. ಜಿ.ಮಧು:</u> ಅನುದಾನ ಕೋರಿ ಪ್ರಸ್ತಾವನೆಯೊಂದಿಗೆ ಸರ್ಕಾರಕ್ಕೆ ನಿಯೋಗ ತೆರಳಬೇಕೆಂದು ನಿರ್ಣಯವಾಗಿರುವ ಬಗ್ಗೆ.

ಡಾ. ಜಿ.ಮಧು ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಆಡಳಿತಾತ್ಮಕ, ಶೈಕ್ಷಣಿಕ ಸಂಶೋಧನೆ ಮತ್ತು ಮೂಲಭೂತ ಸೌಲಭ್ಯಗಳ ಅಭಿವೃದ್ಧಿಗಾಗಿ ವಿಶೇಷ ಅನುದಾನ ಕೋರಿ ಪ್ರಸ್ತಾವನೆಯೊಂದಿಗೆ ಸರ್ಕಾರಕ್ಕೆ ನಿಯೋಗ ತೆರಳಬೇಕೆಂದು ನಿರ್ಣಯವಾಗಿತ್ತು. ಎಲ್ಲವೂ ಸಿದ್ಧವಾಗಿದೆಯೇ ಎಂದರು.



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.

Scanned with OKEN Scanner

ಶ್ರೀ ಕೆ.ಪಿ. ಶ್ರೀಪಾಲ್ ರವರು ಮಾತನಾಡಿ, ಈ ಬಗ್ಗೆ ಸರ್ಕಾರದ ಸಂಪರ್ಕದಲ್ಲಿದ್ದೇನೆ. ಏಪ್ರಿಲ್ 15 ರ ನಂತರ ಮಾನ್ಯ ಮುಖ್ಯಮಂತ್ರಿಯವರ ಭೇಟಿಗೆ ದಿನಾಂಕ ನೀಡುವುದಾಗಿ ಮಾಹಿತಿ ನೀಡಿದ್ದಾರೆ. ಅಷ್ಟರೊಳಗೆ ಪಿಂಚಣಿ ಅನುದಾನ, ಅಭಿವೃದ್ಧಿ ಅನುದಾನ, ಅತಿಥಿ ಉಪನ್ಯಾಸಕರ ವೇತನ, ಹೊರಗುತ್ತಿಗೆ ನೌಕರರ ವೇತನ, ಖಾಲಿ ಇರುವ ಹುದ್ದೆಗಳಿಗೆ ಅಧ್ಯಾಪಕ ಮತ್ತು ಅಧ್ಯಾಪಕೇತರ ನೌಕರರ ನೇಮಕಾತಿ, ದೂರ ಶಿಕ್ಷಣ ಕೋರ್ಸ್‌ಗಳನ್ನು ಪುನ: ಆರಂಭಿಸುವುದು, ಯು.ಯು.ಸಿ.ಎಂ.ಎಸ್. ತಂತ್ರಾಂಶವನ್ನು ನಿಲ್ಲಿಸುವುದು ಸೇರಿದಂತೆ, ಸರ್ಕಾರದಿಂದ ಅಗತ್ಯವಿರುವ ಅನುದಾನ ಮತ್ತು ಮಂಜೂರಾತಿಗಾಗಿ ವಿವರವಾದ ಪ್ರಸ್ತಾವನೆಗಳನ್ನು ಸಿದ್ಧಪಡಿಸಿ ಎಂದರು. ಎಲ್ಲಾ ಸದಸ್ಯರು ಇದಕ್ಕೆ ಸಮ್ಮತಿ ಸೂಚಿಸಿದರು.

**2025–ಸಿಂ–3.06(3):** **ಶ್ರೀಮತಿ ಸಾಕಮ್ಮ:** ಒಂದೇ ಹುದ್ದೆಗೆ ಬಡ್ತಿ ನೀಡಿರುವ ಕುರಿತು.

ಶ್ರೀಮತಿ ಸಾಕಮ್ಮ ರವರು ಮಾತನಾಡಿ, ವಿಶ್ವವಿದ್ಯಾಲಯಕ್ಕೆ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಒಂದು ಹುದ್ದೆ ಮಾತ್ರ ಸರ್ಕಾರದಿಂದ ಮಂಜೂರಾಗಿದ್ದು, ಅದನ್ನು ಬೇರೆ ಇಲಾಖೆಗಳಿಂದ ನಿಯೋಜನೆಗಾಗಿ ಇಡಬೇಕಾಗಿತ್ತು ಅಥವಾ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾಗಿತ್ತು. ಆದರೆ, ಆ ಹುದ್ದೆಯನ್ನು ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕಾಳರಾಜರವರಿಗೆ ಮುಂಬಡ್ತಿ ಮೂಲಕ ನೀಡಲಾಗಿದೆ. ಈಗ ಅವರು ಬೇರೆ ಇಲಾಖೆಗಳಿಗೆ ನಿಯೋಜನೆ ಕೇಳುತ್ತಿದ್ದಾರೆ. ಅವರ ಬಡ್ತಿಗಾಗಿ ರಚಿಸಿರುವ ಪರಿನಿಯಮದಲ್ಲಿ ಮುಂಬಡ್ತಿಯಿಂದ ತಗುಲುವ ಹೆಚ್ಚುವರಿ ವೆಚ್ಚವನ್ನು ಆಂತರಿಕ ಸಂಪನ್ಮೂಲದಿಂದ ಭರಿಸಲಾಗುವುದು ಎಂದಿದೆ. ಆದರೆ, ಈಗ ವೇತನವು ಹೆಚ್.ಆರ್.ಎಂ.ಎಸ್. ಮೂಲಕ ಆಗುತ್ತಿರುವುದರಿಂದ ವ್ಯತ್ಯಾಸದ ಮೊಬಲಗನ್ನು ಕೂಡ ಸರ್ಕಾರದಿಂದಲೇ ಪಾವತಿಸಲಾಗುತ್ತಿದೆ. ಆದುದರಿಂದ, ಅವರಿಗೆ ಮತ್ತೆ ಸಹಾಯಕ ಇಂಜಿನಿಯರ್ ಹುದ್ದೆಗೆ ಹಿಂಬಡ್ತಿ ಮಾಡಿ ಅವರು ಕೇಳಿರುವಂತೆ ಬೇರೆ ಇಲಾಖೆಗಳಿಗೆ ನಿಯೋಜನೆ ಮೇಲೆ ತೆರಳಲು ಅನುಮತಿ ನೀಡಬಹುದು. ಈ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಗೆ ವಿವರವಾದ ಪ್ರಸ್ತಾವನೆ ಸಲ್ಲಿಸಿ ಎಂದರು.

**2025–ಸಿಂ–3.06(4ಎ):** **ಶ್ರೀ ಕೆ.ಪಿ. ಶ್ರೀಪಾಲ್:**

1) ಶ್ರೀ ಶ್ರೀನಿವಾಸ್‌ಗೆ ನೀಡಿರುವ ಕಾರಣ ಕೇಳಿ ನೋಟೀಸನ್ನು ಹಿಂಪಡೆಯುವ ಬಗ್ಗೆ.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ ವಿಶ್ವವಿದ್ಯಾಲಯದ ನೌಕರರಾದ ಶ್ರೀ ಶ್ರೀನಿವಾಸ್ ರವರನ್ನು ಈ ಹಿಂದೆ ಸೇವೆಯಿಂದ ಅಮಾನತ್ತುಗೊಳಿಸಲಾಗಿತ್ತು. ನಂತರ ಮಾನ್ಯ ಉಚ್ಚನ್ಯಾಯಾಲಯದಲ್ಲಿ ಅವರ ಅಮಾನತ್ತನ್ನು ರದ್ದುಗೊಳಿಸಲಾಗಿದ್ದು, ನ್ಯಾಯಾಲಯದ ಆದೇಶದಂತೆ ಅವರನ್ನು ಸಹ್ಯಾದ್ರಿ ವಿಜ್ಞಾನ ಕಾಲೇಜಿಗೆ ವರ್ಗಾವಣೆ ಮಾಡಿದೆ. ಅವರಿಗೆ ಮತ್ತೊಮ್ಮೆ ಕಾರಣ ಕೇಳಿ ನೋಟೀಸ್ ನೀಡಲಾಗಿದ್ದು, ಅದನ್ನು ಹಿಂಪಡೆಯಬೇಕೆಂದರು. ಮಾನ್ಯ ಕುಲಪತಿಯವರು ಮಾತನಾಡಿ, ಕಾರಣ ಕೇಳಿ ನೋಟೀಸ್‌ನ್ನು ನೀಡಿರುವ ಬಗ್ಗೆ ಪರಿಶೀಲಿಸಲಾಗುವುದು ಎಂದರು.

ಶ್ರೀ ಶಿವಕುಮಾರ್ ರವರು ಮಾತನಾಡಿ, ಶ್ರೀನಿವಾಸ್‌ರವರಿಗೆ ಯಾವ ಕಾರಣಕ್ಕಾಗಿ ಕಾರಣ ಕೇಳಿ ನೋಟೀಸ್ ನೀಡಲಾಗಿದೆ ಎಂಬುದರ ಬಗ್ಗೆ ಪರಿಶೀಲನೆ ಮಾಡಿ ನಿರ್ಣಯ ಕೈಗೊಳ್ಳಬೇಕು ಎಂದು ತಿಳಿಸಿದ್ದನ್ನು ಒಪ್ಪಲಾಯಿತು.

**ನಿರ್ಣಯ:** ಈ ಕುರಿತಂತೆ ನಿಯಮಾನುಸಾರ ಪರಿಶೀಲಿಸಲು ಸಭೆಯು ತೀರ್ಮಾನಿಸಿತು.

2) ಹೊರಗುತ್ತಿಗೆ/ಏಜೆನ್ಸಿ ನೌಕರರ ವೇತನದ ಕುರಿತು.

ಶ್ರೀ ಕೆ.ಪಿ. ಶ್ರೀಪಾಲ್‌ರವರು ಮಾತನಾಡಿ ವಿಶ್ವವಿದ್ಯಾಲಯದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹೊರಗುತ್ತಿಗೆ/ಏಜೆನ್ಸಿ ನೌಕರರನ್ನು ಕಡಿತಗೊಳಿಸುವಾಗ ಜೇಷ್ಠತೆಯನ್ನು ಪರಿಗಣಿಸಬೇಕೆಂದು ತಿಳಿಸಿದರು.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451
ಶಿವಮೊಗ್ಗ ಜಿಲ್ಲೆ.



Scanned with OKEN Scanner

**2025–ಸಿಂ–3.06(4ಬಿ):** ವಿಶ್ವವಿದ್ಯಾಲಯದ ಬಗ್ಗೆ ಸುದ್ದಿಗಳು ಪ್ರಕಟವಾಗುತ್ತಿರುವ ಬಗ್ಗೆ.

ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ಇತ್ತೀಚೆಗೆ ವಿಶ್ವವಿದ್ಯಾಲಯದ ಬಗ್ಗೆ ರಾಜ್ಯದೆಲ್ಲೆಡೆ ಚರ್ಚೆಯಾಗುತ್ತಿದೆ. ಶಾಸನ ಸಭೆಗಳಲ್ಲಿ ಕೂಡ ವಿಷಯ ಬರುತ್ತಿದೆ. ಇದರ ಬಗ್ಗೆ ವಿಶ್ವವಿದ್ಯಾಲಯದ ನಿಲುವೇನು? ಎಂಬುದರ ಬಗ್ಗೆ ಸ್ಪಷ್ಟೀಕರಣ ನೀಡುತ್ತಿಲ್ಲ. ಇದರಿಂದ ಒನ್‌ವೇ ಮೆಸೇಜ್ ಹೋಗುತ್ತಿದೆ. ಸಾರ್ವಜನಿಕರಲ್ಲಿ ಗೊಂದಲ ಉಂಟಾಗುತ್ತಿದೆ. ನಮಗೆ ಮಾಹಿತಿ ಹಾಗೂ ದಾಖಲೆ ನೀಡಿದಲ್ಲಿ ನಾವೇ ಸ್ಪಷ್ಟೀಕರಣ ನೀಡುತ್ತೇವೆ ಎಂದರು.
ಶ್ರೀ ಶಿವಕುಮಾರ್‌ರವರು ಮಾತನಾಡಿ, ಶಾಸನ ಸಭೆಗಳಲ್ಲಿ ಚರ್ಚಿತ ವಿಷಯಗಳನ್ನು ನಾವು ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸುವುದು ತಪ್ಪಾಗುತ್ತದೆ. ಶಾಸನ ಸಭೆಗೆ ವಿಶ್ವವಿದ್ಯಾಲಯದಿಂದ ಅಗತ್ಯ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಿರುತ್ತಾರೆ ಎಂದರು.

**2025–ಸಿಂ–3.06(4ಸಿ):** ಹಿರಿಯ ವಾಹನ ಚಾಲಕರ ಹುದ್ದೆಗೆ ಬಡ್ತಿ ನೀಡುವ ಬಗ್ಗೆ.

ಶ್ರೀ ಕೆ.ಪಿ.ಶ್ರೀಪಾಲ್ ರವರು ಮಾತನಾಡಿ, ವಿಶ್ವವಿದ್ಯಾಲಯದ ಪರೀಕ್ಷಾ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವಾಹನ ಚಾಲಕರಾದ ಶ್ರೀ ಸುರೇಶ್ ಪಂಡಿತ್‌ರವರು ಒಂದೇ ಹುದ್ದೆಯಲ್ಲಿ ಮೂವತ್ತು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಹಿರಿಯ ವಾಹನ ಚಾಲಕರ ಹುದ್ದೆಗೆ ಬಡ್ತಿ ನೀಡುವಂತೆ ಮನವಿ ಸಲ್ಲಿಸಿದ್ದು, ವಿಶ್ವವಿದ್ಯಾಲಯ ಮಂಜೂರಾದ ಹುದ್ದೆ ಇಲ್ಲದಿರುವುದರಿಂದ ಅವಕಾಶವಿಲ್ಲವೆಂಬ ಕಾರಣದಿಂದ ಪರಿಗಣಿಸುತ್ತಿಲ್ಲ. ಆದುದರಿಂದ, ಅವರ ಸೇವೆಯನ್ನು ಪರಿಗಣಿಸಿ ಬಡ್ತಿ ನೀಡಬಹುದು ಎಂದರು. ಡಾ. ಜಿ. ಮಧು ರವರು ಮಾತನಾಡಿ, ಶ್ರೀ ಸುರೇಶ್ ಪಂಡಿತ್ ರವರು ಬಹಳ ವರ್ಷಗಳಿಂದ ಪರೀಕ್ಷಾ ವಿಭಾಗದಲ್ಲಿ ಪ್ರಶ್ನೆಪತ್ರಿಕೆಗಳ ರವಾನೆ, ಉತ್ತರ ಪತ್ರಿಕೆಗಳ ಸಾಗಾಟ ಮುಂತಾದ ರಹಸ್ಯ ಮತ್ತು ಜವಾಬ್ದಾರಿಯುತ ಕೆಲಸಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿದ್ದಾರೆ. ಅವರ ಕೋರಿಕೆಯನ್ನು ಪರಿಗಣಿಸಬಹುದು ಎಂದರು. ಕುಲಸಚಿವ (ಮೌಲ್ಯಮಾಪನ) ರವರು ಮಾತನಾಡಿ ಈ ಹಿಂದೆ ಕೂಡ ಒಬ್ಬರಿಗೆ ಹಿರಿಯ ವಾಹನ ಚಾಲಕರ ಹುದ್ದೆಗೆ ಬಡ್ತಿ ನೀಡಲಾಗಿತ್ತು. ರಾಜ್ಯದ ಬೇರೆ ವಿಶ್ವವಿದ್ಯಾಲಯಗಳಲ್ಲಿ ಕೂಡ ಈ ರೀತಿ ಬಡ್ತಿ ನೀಡುತ್ತಿದ್ದಾರೆ. ಆದುದರಿಂದ ಪರಿಗಣಿಸಬಹುದು ಎಂದರು.

ಚರ್ಚೆಯ ನಂತರ, ಶ್ರೀ ಸುರೇಶ್ ಪಂಡಿತ್ ಇವರಿಗೆ ಹಿರಿಯ ಚಾಲಕರ ಹುದ್ದೆಗೆ ನಿಯಮಾನುಸಾರ ಪರಿಶೀಲಿಸಿ ಬಡ್ತಿ ನೀಡಲು ಕ್ರಮಕೈಗೊಳ್ಳಬೇಕೆಂದು ಸಭೆಯು ನಿರ್ಣಯಿಸಿತು.

**2025–ಸಿಂ–3.06(5):** <u>ಶ್ರೀ ಶಿವಕುಮಾರ್ ಎಂ</u> : ವಿಶ್ವವಿದ್ಯಾಲಯದ ದಾಖಲಾತಿಗಳು ಹೊರ ಹೋಗುತ್ತಿರುವ ಕುರಿತು.

ಶ್ರೀ ಶಿವಕುಮಾರ್ ಎಂ. ರವರು ಮಾತನಾಡಿ ಮಾಹಿತಿ ಹಕ್ಕು ಕಾಯ್ದೆಯಡಿ ಒದಗಿಸುವುದರ ಹೊರತುಪಡಿಸಿ, ವಿಶ್ವವಿದ್ಯಾಲಯದ ಹಲವು ಮಾಹಿತಿ/ದಾಖಲೆಗಳು ನೌಕರರ ಮೂಲಕ ಬಾಹ್ಯ ವ್ಯಕ್ತಿಗಳ ಕೈಸೇರುತ್ತಿವೆ. ಮಾಹಿತಿ/ದಾಖಲೆಗಳನ್ನು ಪಡೆದುಕೊಂಡವರು ಅವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದು, ಇದರಿಂದ ವಿಶ್ವವಿದ್ಯಾಲಯದ ಘನತೆಗೆ ಕುಂದುಂಟಾಗುತ್ತಿದೆ. ಈ ರೀತಿ ಮಾಹಿತಿ/ದಾಖಲೆಗಳನ್ನು ನೀಡುತ್ತಿರುವ ನೌಕರರ ವಿರುದ್ಧ ಯಾವುದೇ ಮುಲಾಜಿಲ್ಲದೆ ಪ್ರಕರಣ ದಾಖಲಿಸಬೇಕು. ಅಲ್ಲದೇ, ದಾಖಲೆಗಳನ್ನು ಅನಧಿಕೃತವಾಗಿ ಹೊಂದಿರುವವರ ವಿರುದ್ಧ ಕೂಡ ದಾಖಲೆಗಳು ಹೇಗೆ ದೊರೆತವೆಂಬ ಬಗ್ಗೆ ದೂರು ದಾಖಲಿಸಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡು ತನಿಖೆ ನಡೆಸಬೇಕು ಎಂದರು. ಎಲ್ಲಾ ಸದಸ್ಯರು ಇದಕ್ಕೆ ಧ್ವನಿಗೂಡಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ, ಕೆಲವು ಬಾಹ್ಯ ವ್ಯಕ್ತಿಗಳು ವಿಶ್ವವಿದ್ಯಾಲಯದ/ಅಧಿಕಾರಿಗಳ ವಿರುದ್ಧ ತಪ್ಪು/ಸುಳ್ಳು ಮಾಹಿತಿಗಳೊಂದಿಗೆ ದೂರುಗಳನ್ನು ಸಲ್ಲಿಸುತ್ತಿದ್ದು, ದೂರಿನಲ್ಲಿ ನೈಜತೆ ಇದೆಯೇ



ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನಸಹ್ಯಾದ್ರಿ
ಶಂಕರಘಟ್ಟ-577 451

Scanned with OKEN Scanner

ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ನಂತರ ಸದರಿ ದೂರುಗಳ ಬಗ್ಗೆ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

ಅಂತಿಮವಾಗಿ ಸಭೆಗೆ ಆಗಮಿಸಿ ಸೂಕ್ತ ಸಲಹೆ, ಸಹಕಾರ ನೀಡಿದ ಎಲ್ಲಾ ಸದಸ್ಯರುಗಳಿಗೆ ಕುಲಸಚಿವ (ಮೌಲ್ಯಮಾಪನ) ರವರು ಹೃತ್ಪೂರ್ವಕವಾಗಿ ವಂದಿಸಿದ ನಂತರ ಸಭೆಯ ಕಲಾಪಗಳು ಮುಕ್ತಾಯವಾದವು.

ಕುಲಸಚಿವರು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**

ಸಹಿ/-
ಕುಲಪತಿಗಳು

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನಸಹ್ಯಾದ್ರಿ**
**ಶಂಕರಘಟ್ಟ-577 451**
**ಶಿವಮೊಗ್ಗ ಜಿಲ್ಲೆ.**



Scanned with OKEN Scanner